**ನೂಪುರ ಭ್ರಮರಿ–ನೃತ್ಯಸಂಶೋಧನ ನಿಯತಕಾಲಿಕೆ ( 2321– 2519 ISSN NO)**

**ಸಂಚಿಕೆ 1; ಸಂಪುಟ 14 ; ಜನವರಿ –ಏಪ್ರಿಲ್ 2020 ; ಅಂಕಣ- ಭರತಕೌತುಕ**

No part of this publication is allowed for copying or reproducing. Copyright protected. Copyright infringement is punishable offence.

# ಅವಧಾನ ಪಲ್ಲವಿ – ತಾಳಾವಧಾನ

## ವಿಶಿಷ್ಟ, ಸವಾಲಿನ ತಾಳ ಕಲೆ

**ಕಾಂಚನ ರೋಹಿಣಿ ಸುಬ್ಬರತ್ನಂ**
**(ಸಂಗೀತ ವಿದ್ವಾಂಸರು, ಬೆಂಗಳೂರು ನಿವಾಸಿ)**

ಅವಧಾನ ಎಂದರೆ ಚಿತ್ತೈಕಾಗ್ರತೆ, ಸ್ಥಿರ ಮನಸ್ಸು, ಗಮನವಿರಿಸುವಂತೆ ಎಂಬ ಅರ್ಥಗಳನ್ನು ಅರ್ಥಕೋಶಗಳು ನೀಡಿವೆ. ಎಲ್ಲ ಕಾರ್ಯಗಳೂ, ಕಲೆಗಳೂ, ಚಿತ್ತೈಕಾಗ್ರತೆಯನ್ನೇ ಅಪೇಕ್ಷಿಸಿ, ಅವಲಂಬಿಸಿ ಸೃಷ್ಟಿಗೊಳ್ಳುವಂತೆ ಸಂಗೀತವೂ ಅವಧಾನವನ್ನು ಅವಲಂಬಿಸಿದೆ. ಸಂಗೀತವೇ ಒಂದು ಅವಧಾನವೆಂದು ಹೇಳಬಹುದು. ಏಕ ಕಾಲದಲ್ಲಿ ಶ್ರುತಿ, ರಾಗ, ತಾಳ, ಲಯ, ಮನೋಧರ್ಮ ಕಲ್ಪನೆ, ಸಾಹಿತ್ಯ ಇತ್ಯಾದಿಗಳಲ್ಲಿ ಗಮನವಿಟ್ಟು ಅನೇಕಾನೇಕ ರಚನೆಗಳನ್ನು ನೆನಪಿನಲ್ಲಿಟ್ಟು ಹಾಡುವುದನ್ನೂ , ವಾದ್ಯವನ್ನು ನುಡಿಸುವುದನ್ನೂ ಏಕ ಕಾಲದಲ್ಲಿಯೇ ಮಾಡುವುದು ಅವಧಾನದಿಂದ ಮಾತ್ರ ಸಾಧ್ಯವಾದೀತಷ್ಟೆ. ಸಂಗೀತದಲ್ಲಿ ಅವಧಾನವೆಂಬ ಶಬ್ದವು ಎರಡು ಕೈಗಳಲ್ಲೂ ಬೇರೆ ಬೇರೆ ತಾಳಗಳನ್ನು ಹಾಕಿಕೊಂಡು ಗೇಯಪ್ರಕಾರಗಳನ್ನು ಪ್ರಸ್ತುತ ಪಡಿಸುವುದಕ್ಕೆ ಪ್ರಯೋಗವಾಗುತ್ತದೆ. ಕೃತಿ, ವರ್ಣ ಇತ್ಯಾದಿ ರಚನೆಗಳಿಗೆ ಬೇರೆ ಬೇರೆ ತಾಳಗಳನ್ನು ಎರಡು ಕೈಯಲ್ಲಿ ಅವಧಾನದಲ್ಲಿ ಹಾಕಿ ಹಾಡಿದರೂ ವಿನ್ಯಾಸ ವ್ಯಾಪ್ತಿಯು ಕಡಿಮೆಯಾಗುವುದರಿಂದ ಪಲ್ಲವಿಯೆಂಬ ಗೇಯಪ್ರಕಾರವಿಶೇಷಕ್ಕೆ ತಾಳದ ಅವಧಾನವು ವಿಶೇಷವಾಗಿ ಪ್ರಯೋಗವಾಗುತ್ತದೆ. ಅಭಿನಯಕ್ಕಾಗಿ ನವರಸಗಳನ್ನೂ, ಆಧ್ಯಾತ್ಮಿಕ ಚಿಂತನೆಗಳನ್ನೂ, ಹಾಗೂ ಸಾಮಾಜಿಕ ಮೌಲ್ಯಗಳ ಪ್ರಸರಣಕ್ಕಾಗಿಯೂ ಸಂಗೀತದ ಮೂಲಕ ಶ್ರೋತೃಗಳಿಗೆ ತಲುಪುವಂತೆ ಮಾಡಲು ಸಾಧ್ಯವಾಗುವ ಅನೇಕ ಗೇಯಪ್ರಕಾರಗಳು ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಇರುವಂತೆಯೇ ಈ ‘ಪಲ್ಲವಿ’ ಹಾಗೂ ಅದರದ್ದೇ ಪ್ರಬೇಧವಾದ ‘ಅವಧಾನತಾಳಪಲ್ಲವಿ’ಗಳೆಂಬ ಗೇಯರಚನೆಗಳು ಕಲಾವಿದರ ಪಾಂಡಿತ್ಯಕ್ಕೆ ಪ್ರೌಢಿಮೆಗೆ, ವಿದ್ವತ್ ಪ್ರದರ್ಶನಕ್ಕೆ ಇರುವ ರಚನೆಗಳು. ಸಂಗೀತ ವಿದ್ವಾಂಸನ ವಿದ್ವತ್ತಿಗೆ, ಸಾಧನೆಗೆ, ಪ್ರತಿಭೆಗೆ ಅಳತೆಗೋಲು ; ಪಕ್ಕವಾದ್ಯದವರ ಸಾಮರ್ಥ್ಯಕ್ಕೆ ಸವಾಲು ; ಶ್ರೋತೃವರ್ಗದಲ್ಲಿ 'ತಿಳುವಳಿಕಸ್ಥರ' ವೃಂದಕ್ಕೆ ರಸದೌತಣ ; ಹುರಿಗಡಲೆ; ತಿಳಿಯದವರಿಗೆ ಕಬ್ಬಿಣದ ಕಡಲೆಯಾದ ಈ ಗೇಯಪ್ರಕಾರಗಳು ಸಂಗೀತ ತ್ರಿಮೂರ್ತಿಗಳಿಗೆ ಒಂದು ತಲೆಮಾರಿನಷ್ಟು ಆರಂಭವಾಗಿ, ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಹಲವರು ಪಲ್ಲವಿ ಗಾಯನವನ್ನು ವ್ಯವಸ್ಥೆಗೊಳಿಸಿ, ಅದರ ಗಾಯನದಲ್ಲಿ ಪ್ರಸಿದ್ಧರೂ ಆದರೆಂದು ತಿಳಿದುಬರುತ್ತದೆ. ಇವರೆಲ್ಲರೂ ತಂಜಾವೂರಿನ ತುಳಜ, ಪ್ರತಾಪಸಿಂಹ, ಅಮರಸಿಂಹ ಮತ್ತು ಶರಭೋಜಿಯವರುಗಳ ಆಸ್ಥಾನಗಳಲ್ಲಿ ಇದ್ದವರು. 17ನೆಯ ಶತಮಾನದಲ್ಲಿ ಅಷ್ಟಪದಿಗಳಿಗೆ ಕರ್ಣಾಟಕಸಂಗೀತದ ಧಾತುವನ್ನು ಮೊಟ್ಟಮೊದಲು ಅನ್ವಯಿಸಿದನೆಂದು ಹೇಳಲಾಗುವ ತಿರುಮಲರಾಜ ಪಟ್ಟಣದ ರಾಮುಡು ಭಾಗವತನು ಪಲ್ಲವಿಗಾಯನದಲ್ಲಿ ನಿಷ್ಣಾತನಾಗಿದ್ದನೆಂದು ಹೇಳಲಾಗುತ್ತದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ರವರ ಕಾಲದಲ್ಲಿ ಆಸ್ಥಾನ ವಿದ್ವಾಂಸರಾಗಿದ್ದ ವೀಣೆ ಶಾಮಣ್ಣನವರು ಅವಧಾನ ಪುರುಷರು. ತಲೆಯಲ್ಲೊಂದು, ತೊಡೆಯಲ್ಲೊಂದು ವೀಣೆಯಲ್ಲೊಂದು —ಹೀಗೆ ಮೂರು ತಾಳಗಳನ್ನು ಏಕಕಾಲದಲ್ಲಿ ಹಾಕಿಕೊಳ್ಳುತ್ತ ಅವುಗಳಲ್ಲಿ ಒಂದೇ ಪಲ್ಲವಿಯನ್ನು ನುಡಿಸುತ್ತಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ ಹಿರಿಯ ಸಹೋದರಿ ಜಯಲಕ್ಷ್ಮಣ್ಣಿಯವರಿಗೆ ಒಂದು ಕೈಯಲ್ಲಿ ಪಿಯಾನೋ ನುಡಿಸುತ್ತ ಇನ್ನೊಂದು ಕೈಯಲ್ಲಿ ತಬಲದಲ್ಲಿ ಠೇಕಾ ನುಡಿಸುತ್ತ ಹಾಡುವ ಅವಧಾನವು ಸಿದ್ಧಿಸಿತ್ತು.

No part of this publication is allowed for copying or reproducing. Copyright protected. Copyright infringement is punishable offence.

ಅವಧಾನತಾಳಪಲ್ಲವಿಯ ಪರಿಚಯವಾಗಬೇಕಾದರೆ ಮೊದಲು ಪಲ್ಲವಿಯ ರಚನೆಯ ಬಗ್ಗೆಯ ಮಾಹಿತಿಯ ಅರಿವಿನ ಅಗತ್ಯವಿದೆ. ಪಲ್ಲವಿಯಲ್ಲಿ ಮಿತವಾದ ಅಕ್ಷರಗಳಲ್ಲಿರುವ ಸಾಹಿತ್ಯ ಭಾಗವನ್ನು ಒತ್ತಾಗಿ ಸ್ವರಗಳಿಲ್ಲದ, ಆದರೆ ಆಯಾ ತಾಳದ ಆವರ್ತನಕ್ಕೆ ಅಳವಡಿಸಿಲ್ಪಟ್ಟ ಒಂದು ಧಾತುವಿಗೆ ಅಳವಡಿಸಲಾಗುತ್ತದೆ. ಇದಕ್ಕೆ ಸಂಯೋಜಿಸಲಾಗುವ ರಾಗದ ಭಾಗವು ಮೂಲದಲ್ಲಿ ಸರಳವಾಗಿ ಕಂಡರೂ, ಅದನ್ನು ವಿವಿಧ ರೀತಿಯಲ್ಲಿ ರಾಗ ವಿನ್ಯಾಸ ಮಾಡಲೂ, ರಾಗ ಭಾವವನ್ನು ವಿಸ್ತರಿಸಲೂ, ಹಾಗೂ ಆಯಾ ತಾಳದ ಹಾಗೂ ಸಾಹಿತ್ಯದ ಚೌಕಟ್ಟಿನಲ್ಲಿಯೇ ಸಂಚಾರೀಭಾವಸಮೃದ್ಧಿಯನ್ನು ಏರ್ಪಡಿಸಲು ಸಾಧ್ಯವಾಗುವಂತಿರುತ್ತದೆ. ಮಾತುವಿನ (= ಸಾಹಿತ್ಯ,) ಪ್ರತಿಯೊಂದು ಅಕ್ಷರವೂ ಆಯಾ ತಾಳಾವರ್ತದಲ್ಲಿ

Copyright protected

No part of this publication is allowed for copying or reproducing. Copyright protected. Copyright infringement is punishable offence.

ನಿಯತವಾದ ಸ್ಥಾನದಲ್ಲಿ ನಿಶ್ಚಲವಾಗಿ ನಿಬದ್ಧಗೊಂಡಿರುತ್ತದೆ. ಪಲ್ಲವಿಗಾಯನದಲ್ಲಿ ಏನೆಲ್ಲ ವಿನ್ಯಾಸವನ್ನು ಮಾಡಿದರೂ ಈ ನಿಬದ್ಧಗೊಂಡ ಅಕ್ಷರಗಳು ಸ್ಥಾನಪಲ್ಲಟಗೊಳ್ಳುವಂತೆಯೇ ಇಲ್ಲ. ಇದು ಪಲ್ಲವಿಯ ಪ್ರಾಥಮಿಕ ಹಾಗೂ ಮೂಲಭೂತ ನಿಯಮ. ತಾಳಾವರ್ತದಲ್ಲಿ ಹೀಗೆ ನಿಯತಿಗೊಂಡ ಮಾತುವಿನ ಹಾಗೂ ಧಾತುವಿನ ಮೂಲಪಾಠವನ್ನು ಈ ಎರಡರಲ್ಲೂ ಪಲ್ಲವಿಯ ಪೂರ್ವಾಂಗ ಮತ್ತು ಉತ್ತರಾಂಗವೆಂದು ವಿಭಾಗಿಸಬಹುದು. ಇವೆರಡನ್ನೂ ಪ್ರತ್ಯೇಕಿಸುವ ಬಿಂದುವಿಗೆ ಪದಗರ್ಭ ಅಥವಾ ಅರುದಿಯೆಂದು ಹೆಸರು. ಇದು ಸಾಮಾನ್ಯವಾಗಿ ತಾಳದ ಉತ್ತರಾಂಗವನ್ನು ಆರಂಭಿಸುವ ಘಾತದ, ಎಂದರೆ ತಾಳದ 'ಏಟಿ'ನ ಮೇಲೆ ಇರುತ್ತದೆ. ಇದರ ನಂತರ ನಿರ್ದಿಷ್ಟ ಪ್ರಮಾಣದ ವಿಶ್ರಾಂತಿ ಇರುತ್ತದೆ. ಅರುದಿಯ ಮೇಲೆ ಪಲ್ಲವಿಯ ಮಾತುವಿನ ಒಂದು ಅಕ್ಷರವು ಇರಲೇ ಬೇಕಾದ ಅನಿವಾರ್ಯ ನಿಯಮವಿದೆ. ಬಹಳ ಅಪರೂಪದ ಸಂದರ್ಭಗಳಲ್ಲಿ ಪದಗರ್ಭವು ಪಲ್ಲಟಗೊಳ್ಳುವ ಸಂದರ್ಭಗಳೂ ಇವೆ. ಪಲ್ಲವಿಯು ಸಮ, ಅತೀತ ಮತ್ತು ಅನಾಗತವೆಂಬ ತಾಳಗ್ರಹಗಳಲ್ಲಿ ಯಾವುದಾದರೊಂದರಲ್ಲಿ ಆರಂಭವಾಗುತ್ತದೆ. ಹೀಗೆ ತಾಳಗ್ರಹಗಳ ಅಕ್ಷರ ಸ್ಥಾನಗಳಲ್ಲಿ ಆಯಾ ಎಣಿಕೆಯ ನಿಯತವಾದ ಅಕ್ಷರಸ್ಥಾನವು ತಾಳಾವರ್ತದ ಮೊದಲ ಎಣಿಕೆಯಲ್ಲಿ ಕಾಲು, ಅರ್ಧ ಅಥವಾ ಮುಕ್ಕಾಲು ಅಂಶವನ್ನು ಬಿಟ್ಟಿದ್ದರೆ ಅದಕ್ಕೆ ಕ್ರಮವಾಗಿ ಕಾಲು ಎಡುಪ್ಪು, ಅರ್ಧ ಎಡುಪ್ಪು, ಮುಕ್ಕಾಲು ಎಡುಪ್ಪು ಎಂದು ಹೆಸರು. ಎಡುಪ್ಪು ಎನ್ನುವುದು ದೇಶೀ ಹೆಸರು. 'ಎಡ' ಎಂದರೆ ಎಲ್ಲ ದ್ರಾವಿಡ ಭಾಷೆಗಳಲ್ಲಿಯೂ ಸ್ಥಳ ಎಂದೇ ಅರ್ಥವಿದೆ. ರಾಗದ ಅಥವಾ ಹಾಡಿನ ಆರಂಭದ ಸ್ಥಾನಕ್ಕೂ ಎಡುಪ್ಪು ಎಂದೇ ಹೆಸರಿದ್ದರೂ ಈ ಶಬ್ದವು ತಾಳಗ್ರಹ ಎನ್ನುವ ಅರ್ಥದಲ್ಲಿಯೇ ಹೆಚ್ಚು ಪ್ರಯೋಗವಾಗುತ್ತದೆ. ಈ ಮೂರೂ ಎಡುಪ್ಪುಗಳು - ಒಂದು ತಾಳಾವರ್ತದ ಮೊದಲಿನಲ್ಲೇ (ಎಂದರೆ, ಹಿಂದಿನ ಆವರ್ತದ ಕಡೆಯಲ್ಲೇ) ಸಾಹಿತ್ಯವು ಆರಂಭವಾಗುವ ಅತೀತ ಗ್ರಹಕ್ಕೂ, ತಾಳದ ನಂತರ ಸಾಹಿತ್ಯವು ಆರಂಭವಾಗುವ ಅನಾಗತಗ್ರಹಕ್ಕೂ ಅನ್ವಯಿಸುತ್ತವೆ. ಅತೀತ ಗ್ರಹದಲ್ಲಿ ಆರಂಭವಾಗುವ ಪಲ್ಲವಿಗಳು ಸಮ ಮತ್ತು ಅನಾಗತ ಗ್ರಹಗಳಲ್ಲಿ ಆರಂಭವಾಗುವ ಪಲ್ಲವಿಗಳಿಗಿಂತಲೂ ಹೆಚ್ಚು ಕ್ಲಿಷ್ಟವೂ ಜಟಿಲವೂ ಆಗಿರುತ್ತವೆ. ಪಲ್ಲವಿಯು ಮಧ್ಯ ಅಥವಾ ವಿಲಂಬಲಯದಲ್ಲಿ ನಿಬದ್ಧವಾಗಿರುತ್ತದೆ. ಪಲ್ಲವಿಯ ಧಾತುವು ತಾಳಾವರ್ತದ ಪ್ರತಿಯೊಂದು ಎಣಿಕೆಯಲ್ಲಿಯೂ ಸಮವಾಗಿ ಎರಡು, ನಾಲ್ಕು, ಎಂಟು —ಹೀಗೆ ಉತ್ತರೋತ್ತರವಾಗಿ ದ್ವಿಗುಣವಾಗಿ —ಅಕ್ಷರಕಾಲದಷ್ಟು ಪ್ರಮಾಣವಾಗಿ ಸಾಗಿದರೆ ಅದನ್ನು ಎರಡುಕಳೆಚೌಕ, ನಾಲ್ಕುಕಳೆಚೌಕ, ಎಂಟುಕಳೆಚೌಕ —ಎಂದು ಮುಂತಾಗಿ ಕರೆಯಲಾಗುತ್ತದೆ. ಚೌಕ ಎಂದರೆ ಇಲ್ಲಿ ನಡೆಯ ವಿಸ್ತಾರ, ವೇಗ ಎಂದು ಅರ್ಥ
ತಾಳದ ದಶಪ್ರಾಣಗಳಲ್ಲಿ 'ಮಾರ್ಗ' ಎಂಬುದೊಂದಿದೆ. ಅದರ ಅನ್ವಯವೇ ಇದು. ವಿದ್ವತ್ ಪ್ರದರ್ಶನಕ್ಕೆ ಸಮಯವೊದಗಿದಾಗ ಪಲ್ಲವಿಗಾಯಕರು ಎಂಟು, ಹದಿನಾರು, ಅಪರೂಪವಾಗಿ ಮೂವತ್ತೆರಡು ಕಳೆ ಚೌಕದ ಪಲ್ಲವಿಯನ್ನು ಹಾಡುವುದೂ ಉಂಟು.

ಪಲ್ಲವಿಯನ್ನು ಈಗ ಸುಳಾದಿ ತಾಳಗಳಲ್ಲಿ ರಚಿಸಿ ಹಾಡುವುದೇ ಹೆಚ್ಚು ವಾಡಿಕೆಯಾದರೂ ಈಗ ದೇಶೀತಾಳಗಳಲ್ಲಿಯೂ ಪಲ್ಲವಿಗಳನ್ನು ಹಾಡುವುದು ಅಪರೂಪವಾಗಿ ಕಂಡುಬರುತ್ತದೆ. ಇವುಗಳು 18 ನೇ ಶತಮಾನದಲ್ಲಿಯೇ ಕರ್ನಾಟಕ, ಆಂಧ್ರ, ತಮಿಳುನಾಡುಗಳಲ್ಲಿ ರೂಢಿಯಾಗಿದ್ದರೂ 19ನೆಯ ಶತಮಾನದಲ್ಲಿ ಕರ್ಣಾಟಕದಲ್ಲಿ ನೂರೆಂಟು ದೇಶೀತಾಳಗಳಲ್ಲಿ ಪಲ್ಲವಿ ಗಾಯನವನ್ನು, ಪಲ್ಲವಿಯ ಆಶುರಚನೆ, ಆಶುಗಾಯನದಲ್ಲಿ ಪ್ರತಿಭಾವಂತ ವಾಗ್ಗೇಯಕಾರನಾಗಿದ್ದ ಪಲ್ಲವಿ ರಾಮಲಿಂಗಯ್ಯನು ಪ್ರಾರಂಭಿಸಿದ್ದನು. ಈತನು ತ್ಯಾಗರಾಜರ ಸೋದರ ಸಂಬಂಧಿಯೂ, ಶಿಷ್ಯನೂ ಆಗಿದ್ದ ಮಾನಂಬುಚಾವಡಿ ವೆಂಕಟಸುಬ್ಬಯ್ಯನವರ ಶಿಷ್ಯ. ಸುಳಾದಿತಾಳಗಳಿಗಿಂತ ಹೆಚ್ಚು ವಿಸ್ತಾರವಾದ ಕೆಲವು ದೇಶೀತಾಳಗಳಲ್ಲಿ ಸುಳಾದಿತಾಳಗಳಲ್ಲಿ ಇಲ್ಲದ ಗುರು, ಲಘು, ಪ್ಲುತ, ಹಂಸಪಾದ ಅಥವಾ ಕಾಕಪಾದ ಎಂಬ ಅಂಗಗಳೂ ಇರುತ್ತವೆ. ಲಘುಜಾತಿಯ ಅನ್ವಯವು ಈ ಅಂಗಗಳಿಗೂ ಇರುತ್ತವೆ. ವಿರಾಮವೆಂಬ ಬೇರೆ ಅಂಗವೂ ಇರುತ್ತದೆ. ಈ ವಿಧವಾದ ಪಲ್ಲವಿಗಾಯನವು ಗಾಯಕರಲ್ಲಿ ತಾಳಲಯಗಳ ಮೇಲಿನ ವಿಶೇಷವಾದ ಹಿಡಿತವನ್ನೂ ಧಾರಣಶಕ್ತಿಯನ್ನೂ ಅಪೇಕ್ಷಿಸುತ್ತದೆ. ಆದುದರಿಂದ ಕ್ಲಿಷ್ಟವೂ ಕಷ್ಟವೂ ಆದ ಇವುಗಳನ್ನು ಹಾಡುವುದು ಅಪರೂಪವಾಗಿರುವುದು ಸ್ವಾಭಾವಿಕವೇ ಆಗಿದೆ.
ಇವೇ ಅಲ್ಲದೆ ಇನ್ನೂ ಕಷ್ಟಸಾಧ್ಯವಾದವೂ ಪಾಂಡಿತ್ಯಪ್ರಕಾಶಕವೂ ಆಗಿರುವ ಪಲ್ಲವಿಗಳನ್ನು ಹಾಡಬಯಸುವವರು ಸುಳಾದಿತಾಳಗಳಲ್ಲಿ ಅವಾಂತರ ಬೇಧಗಳಾದ ಮಿಶ್ರತಾಳಗಳು, ತಾಳಮಾಲೆಗಳು ಹಾಗೂ ಸಂಕರ (ಸುಳಾದಿ ಹಾಗೂ ದೇಶೀ ತಾಳಗಳ ಮಿಶ್ರಣ) ತಾಳಗಳನ್ನೂ ಬಳಸಿಕೊಳ್ಳುತ್ತಾರೆ. ಆದರೆ ಇಂತಹವು ಬಹಳ ಅಪರೂಪ. ಇಂತಹ ತಾಳಗಳನ್ನು

Copyright protected

No part of this publication is allowed for copying or reproducing. Copyr protected. Copyright infringement is punishable offence.

ಬಳಸಿಕೊಂಡು ಪಲ್ಲವಿ ರಾಮಲಿಂಗಯ್ಯನ ವಂಶಜರೇ ಆದ ಮೈಸೂರಿನ ವಿದ್ವಾನ್ ಡಾ. ಆರ್. ಎಸ್. ನಂದಕುಮಾರರೂ ಅವರ ಅವಧಾನಪಲ್ಲವಿಯ ಶಿಷ್ಯೆಯರಾದ ಕಾಂಚನಸಹೋದರಿಯರಾದ ವಿದುಷಿ ಕಾಂಚನ ಶ್ರೀರಂಜಿನಿ ಹಾಗೂ ವಿದುಷಿ ಕಾಂಚನ ಶ್ರುತಿರಂಜನಿಯರು ಬಳಸಿಕೊಂಡು ಅವಧಾನತಾಳಪಲ್ಲವಿಗಳನ್ನು ಹಾಡುತ್ತಿದ್ದಾರೆ. ಈ ದೇಶೀತಾಳಗಳು ಅಪಾರ. ಒಬ್ಬೊಬ್ಬ ತಾಳಶಾಸ್ತ್ರಜ್ಞನೂ ತನ್ನದೇ ಆದ ತಾಳಗಳನ್ನು ರಚಿಸಿ ಹರಡಲು ಯತ್ನಿಸಿದ್ದಾನೆ. ಹಾಗಾಗಿ ನೂರಾರು ದೇಶೀತಾಳಗಳು ನಮ್ಮ ಸಂಗೀತಶಾಸ್ತ್ರದಲ್ಲಿ ಗ್ರಂಥಸ್ಥವಾಗಿವೆ. ಮೊದಮೊದಲು ಇವು ಶಾಸ್ತ್ರೀಯ ಸಂಗೀತದಲ್ಲಿ ಪ್ರಯುಕ್ತಗಳಾಗಿದ್ದು, ನಮ್ಮ ಸಂಗೀತ ಮಧ್ಯಯುಗದಲ್ಲಿ ವಿಶೇಷವಾಗಿ ನೃತ್ತಪ್ರಯೋಜಕಗಳಾಗಿ, ಅರ್ವಾಚೀನದಲ್ಲಿ ಪಲ್ಲವಿಗಾಯನದಲ್ಲಿ ಮಾತ್ರ ನಿಂತಿವೆ. ಎರಡು ಬೇರೆ ಬೇರೆ ತಾಳಗಳಲ್ಲಿ ಪಲ್ಲವಿಯು ನಿರ್ಮಿತವಾಗಿದ್ದರೆ ರಟ್ಟೈ ಪಲ್ಲವಿ ಎನ್ನುತ್ತಾರೆ. ಮೇಲೆ ಹೇಳಿದ ಕಲಾವಿದರು ಒಂದು ಕೈಯಲ್ಲಿ ಸಿಂಹನಂದನ ಹಾಗೂ ಎಡಗೈಯಲ್ಲಿ ಸುಳಾದಿ, ಹಾಗೂ ಸಂಕರತಾಳಗಳಾಗಿ ಎಂಟು ತಾಳಗಳನ್ನು ನಡೆಸುತ್ತ ಅವಧಾನತಾಳಪಲ್ಲವಿಯನ್ನು ಹಾಡುತ್ತಾರೆ. ಇದರಲ್ಲಿ ರಾಗಗ್ರಹ ತಾಳಗ್ರಹಗಳೂ, ಪದಗರ್ಭಗಳೂ ನಡೆಗಳೂ ಬೇರೆ ಬೇರೆ ಇದ್ದರೂ ಅವುಗಳನ್ನು ಏಕರೂಪವು ಬರುವಂತೆ, ಸಮಗ್ರವಾಗಿರುವಂತೆ ಚಮತ್ಕಾರವಾಗಿ ಹೆಣೆದು, ಒಂದೇ ಪಲ್ಲವಿಯ ವ್ಯವಹಾರವನ್ನು ಪಡೆದಿರುತ್ತವೆ.

ಪಲ್ಲವಿಗಾಯನದಲ್ಲಿ ಮೂಲ ನಿಬದ್ಧ ಮಾತು ಧಾತುಗಳ ಲಯವನ್ನು ವಿವಿಧ ರೀತಿಯಲ್ಲಿ ವಿನ್ಯಾಸ ಮಾಡಲಾಗುತ್ತದೆ. ಇದರಲ್ಲಿ ಅನುಲೋಮ, ವಿಲೋಮ ಹಾಗೂ ಪ್ರತಿಲೋಮವೆಂಬ ಲಯವಿನ್ಯಾಸವೂ ಇದೆ.ಅನುಲೋಮವೆಂದರೆ ಪಲ್ಲವಿಯ ಮೂಲಪಾಠದ ಲಯದ, ಎಂದರೆ ಮೊದಲನೆಯ ಕಾಲದ ಎರಡರಷ್ಟು ವೇಗದಲ್ಲಿ, ನಂತರ ಅದರ ಎರಡರಷ್ಟು, ಎಂದರೆ ನಾಲ್ಕರಷ್ಟು ವೇಗವಾದ ಮೂರನೆಯ ಕಾಲದಲ್ಲಿ ಹಾಡಲಾಗುವುದು. ಉತ್ತರೋತ್ತರವಾಗಿ ಈ ದ್ವಿಗುಣವೃದ್ಧಿಯನ್ನು ಹಿಂದಿನವರು ಆರು ಕಾಲಗಳವರೆಗೂ ಮಾಡುತ್ತಿದ್ದರು. ಇದು ಅನುಲೋಮ ಕ್ರಮ. ಇದಾದ ಮೇಲೆ ಇದರ ಹಿಂದುಹಿಂದಿನ ಕಾಲಕ್ಕೆ— ಎಂದರೆ ಮೂರನೆಯ ಕಾಲದಿಂದ ಎರಡನೇ ಕಾಲಕ್ಕೆ, ಎರಡನೆಯಕಾಲದಿಂದ ಒಂದನೆಯ ಕಾಲಕ್ಕೆ ಹಾಡಿಕೊಂಡು ಪಲ್ಲವಿಯ ಆರಂಭದ ಕಾಲದಲ್ಲಿ ನಿಲ್ಲಿಸುವುದು ವಿಲೋಮ. ಅನುಲೋಮವಿಲೋಮಗಳಲ್ಲಿ ತಾಳಾವರ್ತದ ಪ್ರತಿಯೊಂದು ಎಣಿಕೆಯ ಕಾಲಪ್ರಮಾಣವನ್ನು ವ್ಯತ್ಯಾಸವಾಗದೆ ನಿಯತವಾಗಿಟ್ಟುಕೊಂಡು ಅದರಲ್ಲಿ ನಿರ್ವಾಹವಾಗುವ ಧಾತುವಿನ ವೇಗವನ್ನು ಉತ್ತರೋತ್ತರವಾಗಿ ಹೆಚ್ಚಿಸಲಾಗುತ್ತದೆ. ಪ್ರತಿಲೋಮದ ಲಯವಿನ್ಯಾಸದಲ್ಲಿ ತಾಳಾವರ್ತದ ಕಾಲಪ್ರಮಾಣವನ್ನು ನಿಯತವಾಗಿಟ್ಟುಕೊಂಡು ಮೂಲಪಲ್ಲವಿಯ ಕಾಲವನ್ನು ಅದರ ಅರ್ಧದಷ್ಟು ವೇಗದಲ್ಲಿ, ಎಂದರೆ ಎರಡರಷ್ಟು ವಿಳಂಬವಾಗಿ, ಅಥವಾ ಕಾಲುಭಾಗದಷ್ಟು ವೇಗವಾಗಿ, ಎಂದರೆ ನಾಲ್ಕರಷ್ಟು ವಿಳಂಬವಾಗಿ ಮತ್ತು ಇದೇ ರೀತಿಯಾಗಿ ದ್ವಿಗುಣ ವಿಳಂಬವಾಗಿ ಹಾಡಲಾಗುತ್ತದೆ. ಪ್ರತಿಲೋಮದ ಇನ್ನೊಂದು ಕ್ರಮದಲ್ಲಿ ಮೂಲಪಲ್ಲವಿಯ ಧಾತುವನ್ನೂ ಅದರ ಒಟ್ಟು ಕಾಲಪ್ರಮಾಣವನ್ನೂ ಅದರ ಮಾತುವಿನಲ್ಲಿರುವ ಅಕ್ಷರಗಳ ಕಾಲಪ್ರಮಾಣಗಳನ್ನೂ ನಿಯತವಾಗಿಟ್ಟುಕೊಂಡು ತಾಳವನ್ನೇ ದ್ವಿಗುಣವಾಗಿ ಬೆಳೆಸುತ್ತ ಹೋಗಲಾಗುವುದು. ಇದನ್ನು ಲಯವೃದ್ಧಿಕ್ರಮ ಅಥವಾ ಲಯಾನುಲೋಮ ಎಂದು ಕರೆಯಬಹುದು. ಇದನ್ನೇ ವಿಲೋಮಕ್ರಮದಲ್ಲಿಯೂ ಮಾಡಬಹುದು. ಈ ರೀತಿಯಾದ ಪ್ರತಿಲೋಮವು ಇಂದು ಬಹಳ ಅಪರೂಪವಾಗಿದೆ. ಈ ಎಲ್ಲ ಕ್ರಮಗಳಲ್ಲಿಯೂ ಅನ್ವಯವಾಗುವ ಸಾಧಾರಣ ನಿಯಮವೆಂದರೆ ಮಾತುಧಾತುನಿಯತಿ. ಎಂದರೆ ಮೂಲಪಾಠದ ಧಾತುವಿನಲ್ಲಿರುವ ಅಕ್ಷರಗಳು ಪರಸ್ಪರವಾದ ತಮ್ಮ ಕಾಲಪ್ರಮಾಣಗಳನ್ನು ಸ್ಥಿರವಾಗಿ ಉಳಿಸಿಕೊಂಡು ತಾಳಾವರ್ತದಲ್ಲಿ ನಿಯತವಾದ ಸ್ವಸ್ಥಾನವನ್ನು ಕಾಯ್ದುಕೊಂಡಿರುವುದು. ಇದೇ ಪಲ್ಲವಿಯ ಮುಖ್ಯವಾದ ಪ್ರಾಣ. ಹಾಗೆಯೇ ಮೂಲವಾದ ಪಲ್ಲವಿಯ ಧಾತುವೂ ಆಯಾ ಸಾಹಿತ್ಯಾಕ್ಷರವನ್ನು ನಿರ್ವಹಿಸುವ ಸ್ವರಸಂದರ್ಭವು ವ್ಯತ್ಯಾಸವಾಗದೆ ನಿಯತವಾಗಿ ಉಳಿದಿರಬೇಕು. ಪ್ರತಿಲೋಮ, ಲಯಾನುಲೋಮಗಳಂತಹ ಸಂದರ್ಭಗಳಲ್ಲಿ ಮಾತ್ರ ಧಾತುಪ್ರವಾಹದ ಅವಿಚ್ಛಿನ್ನತೆಯನ್ನೂ, ರಾಗಭಾವವನ್ನೂ ಕಾಪಾಡಿಕೊಳ್ಳಲು ಆಯಾ ರಾಗಕ್ಕೆ ಉಚಿತವಾದ ಗಮಕಗಳಿಂದ ಆಯಾ ಸ್ವರಸಂದರ್ಭಗಳನ್ನು ಅಲಂಕರಿಸಬಹುದು.

ಪಲ್ಲವಿಯ ರಚನೆಗೆ ಇಂತಹದೇ ರಾಗವಾಗಬೇಕೆಂಬ ನಿಯಮವಿಲ್ಲ. ಆದರೆ ಮನೋರಂಜಕ ಗಮಕ, ರಾಗ ವಿಸ್ತಾರ, ನೆರವಲು, ಸ್ವರ ಕಲ್ಪನೆ ಇತ್ಯಾದಿಗಳನ್ನು ಮನೋಧರ್ಮಪೂರ್ವಕ ವಿಸ್ತರಿಸಲು ಸಾಧ್ಯವಾಗಲು ಅನುಕೂಲವಾಗುವಂತಹ ರಾಗವನ್ನು ಆಯ್ದುಕೊಳ್ಳುವುದು ಪಲ್ಲವಿಯ ರಚನಾಧರ್ಮ. ಹಾಗೂ ಈ ರಾಗ ಸಂಯೋಜನೆಯು ಸಾಹಿತ್ಯದ ಭಾವಕ್ಕೆ ಪೂರಕವಾಗಿರಬೇಕು. ಪಲ್ಲವಿಯ ಮಾತೂ ಮಿತವಾಗಿರಬೇಕು. ಮಾತು ಕಡಿಮೆಯಾದರೆ ಪಲ್ಲವಿಯ ಬಂಧವು ಶಿಥಿಲವಾಗುತ್ತದೆ, ಹೆಚ್ಚಾದರೆ ರಾಗಭಾವಗಳ ಗಮಕದ ಗೇಯತೆಗೆ, ಮನೋಧರ್ಮ ಸೃಷ್ಟಿಗೆ, ನೆರವಲು ಇತ್ಯಾದಿಗಳಿಗೆ

No part of this publication is allowed for copying or reproducing. Copyright protected. Copyright infri
is punishable offence.

ಅವಕಾಶವಿಲ್ಲದೆ ಪಲ್ಲವಿಯ ಸೌಂದರ್ಯವು ಕೆಡುತ್ತದೆ. ಮಾತ್ರವಲ್ಲದೆ ಅನುಲೋಮ, ವಿಲೋಮ, ಪ್ರತಿಲೋಮ, ಲಯಾನುಲೋಮಗಳಂತಹ ಲಯವಿನ್ಯಾಸಗಳನ್ನು ಮಾಡುವುದೂ ಕಷ್ಟವಾಗುತ್ತದೆ. ಪಲ್ಲವಿಯ ಮಾತುಗಳು ಇಂತಹವೇ ಇರಬೇಕೆಂಬ ನಿಯಮವಿಲ್ಲ. ಅದು ದೇವತಾಸ್ತುತಿಯೋ, ಶೃಂಗಾರ ರಸಾತ್ಮಕವಾಗಿಯೋ ಇರಬಹುದು. ಅಪರೂಪವಾಗಿ ಹಾಸ್ಯ, ವ್ಯಂಗ್ಯಗಳ ಮಾತುಗಳೂ ಇರುವ ಕ್ರಮವುಂಟು.

ವಾದ್ಯಗಳಲ್ಲಿ ಹಾಗೂ ಗಾಯನದಲ್ಲಿ ಪ್ರಹೇಲಿಕಾ ಎಂಬ ಪ್ರಬಂಧವೂ ಪ್ರಯೋಗವಾಗುತ್ತದೆ. ಪ್ರಹೇಲಿಕಾ ಎಂದರೆ ಒಗಟು. ಸಂಗೀತಶಾಸ್ತ್ರಗ್ರಂಥಗಳಲ್ಲಿ ಇದನ್ನು ಪುಂಡರೀಕ ವಿಠ್ಠಲನು ಮಾತ್ರ ಹೇಳಿದ್ದರೂ ಕರ್ನಾಟಕದಲ್ಲಿ ವಚನಕಾರರು ಬೆಡಗಿನ ವಚನಗಳೆಂದೂ, ದಾಸವರೇಣ್ಯರು ಮುಂಡಿಗೆಗಳೆಂದೂ ಸಾಹಿತ್ಯಾರ್ಥಗಳಲ್ಲಿ ಒಗಟುಗಳನ್ನಿಟ್ಟು ಪ್ರಬಂಧಗಳನ್ನು ರಚಿಸಿದ್ದಾರೆ. ಪ್ರಹೇಲಿಕಾದಲ್ಲಿ ಕುವಾಡ, ಕೌಚಟ ಮತ್ತು ಅವಧಾನವೆಂಬ ಮೂರು ಬೇಧಗಳಿವೆ. ಕೌಚಟದ ಬಗ್ಗೆ ತನ್ನ ಸಂಗೀತಮಕರಂದದಲ್ಲಿ ವೇದನು ಹೇಳಿದ್ದಾನೆ. ಇಷ್ಟ ಬಂದಷ್ಟು ತಾಳಗಳನ್ನು ಒಮ್ಮೆಗೇ ಮೇಳೈಸಿ ಸಮಾನಮಾತ್ರಾಕಾಲವಿರುವಂತೆಯೂ, ತಮ್ಮ ತಮ್ಮ ಸ್ವರೂಪಗಳಲ್ಲಿಯೇ ಮುಗಿಯುವಂತೆಯೂ ಮಾಡಬೇಕು. ಸಮಾನಮಾತ್ರಾಕಾಲವೆಂದರೆ ಲಯವನ್ನು ಬೇರೆಯಾಗಿಸುವುದರಿಂದ ತಾಳವನ್ನು ಹಿಮ್ಮುಖಗೊಳಿಸುವುದು ಅಥವಾ ತಾಳವನ್ನು ಮಧ್ಯದಲ್ಲಿ ಸೀಳಿ ಈ ವಿಭಾಗಗಳಲ್ಲಿ ಬೇರೆ ಬೇರೆ ಲಯಗಳನ್ನು ಏರ್ಪಡಿಸುವುದರಿಂದಲೂ ಸಮಾನಮಾತ್ರಾಕಾಲವನ್ನು ಏರ್ಪಡಿಸಿ, ಹೀಗೆ ವಿವರಗೊಳಿಸಿದ ಬೇಧಗಳಿಂದ ವಿದ್ವಾಂಸರು ಗಾಯನ, ವಾದನ, ನೃತ್ತಗಳನ್ನು ಮಾಡುವುದು ಕುವಾಡ ಅಥವಾ ಕುವಾಡಕವೆನಿಸುತ್ತದೆ. ಕೌಚಟವೆಂಬುದು ಎರಡು ಅಥವಾ ಅದರಿಂದ ಹೆಚ್ಚಿನ ವಾದ್ಯಪ್ರಬಂಧಗಳನ್ನು ಬೇರ್ಪಡಿಸಿ ಅದರ ಪಾಟಗಳನ್ನು ಬೇರೆ ಬೇರೆಯಾಗಿ ಹೆರಳಿನಂತೆ ಇಷ್ಟಬಂದಂತೆ, ಆದರೆ ಸಮಾನಮಾತ್ರಾಕಾಲವು ಏರ್ಪಡುವಂತೆ, ಸಮಾನ ಸ್ಥಾನಗಳಲ್ಲಿ ಪ್ರಾರಂಭವಾಗಿ ಮುಗಿಯುವಂತೆ ಹೆಣೆದರೆ ಅದು ವಾದ್ಯಕೌಚಟ. ಗೀತಪ್ರಬಂಧಗಳಲ್ಲಿ ಬೇರೆಯೇ ಅರ್ಥ ಪ್ರಕಾಶಿಸಿ, ಇವುಗಳಲ್ಲಿ ಆಯಾಯಾ ತಾಳವನ್ನೇ ಬಿಟ್ಟು ಬೇರೆ ತಾಳವನ್ನು ಪ್ರಯೋಗಿಸಿದರೆ ಆಗ ಬೇರೆಯ ಪ್ರಬಂಧವೂ ಆದರೆ ಅದು ಗೀತಕೌಚಟವೆನಿಸಿಕೊಳ್ಳುತ್ತದೆ. ಇಂತಹ ಗೀತಕೌಚಟದಲ್ಲಿ ಬೇರೆ ಬೇರೆ ತಾಳಗಳನ್ನು ಉಪಯೋಗಿಸಿ ಗೀತದಲ್ಲಿ ಎಂದರೆ, ಸಾಹಿತ್ಯಾರ್ಥದಲ್ಲಿ ಬೇರೆಯೇ ಅರ್ಥವು ಏರ್ಪಡುವಂತಹ ಚಮತ್ಕಾರಯುತ ಒಗಟಿನಂತಹ ಮಾತುಗಳನ್ನು ವಿದ್ವಾನ್ ಡಾ. ಆರ್. ಎಸ್. ನಂದಕುಮಾರರು ಅನೇಕ ಅವಧಾನತಾಳಪಲ್ಲವಿಗಳನ್ನು ಸಂಯೋಜಿಸುವಾಗ ಅಳವಡಿಸಿದ್ದಾರೆ. ಅದಕ್ಕೊಂದು ಉದಾಹರಣೆಯೆಂದರೆ "ತ್ರಿಕಸ್ಯ ಪಂಚಕಸ್ಯ ಕುತ್ರ ಸಂಧಿಃ? ವದಾ ಚತುರ" ಎಂದರೆ ಮೂರು ಮತ್ತು ಐದು ಎಲ್ಲಿ ಸಂಧಿಸುತ್ತವೆ ? ಹೇಳು ಚತುರ! ಎಂಬ ಪ್ರಶ್ನೆಯಲ್ಲಿಯೇ ಉತ್ತರವೂ ಚಮತ್ಕಾರವಾಗಿ ಹುದುಗಿರುವ ಸಂಸ್ಕೃತ ಭಾಷೆಯ ಒಗಟುಗಳನ್ನೂ ಉಪಯೋಗಿಸಿಕೊಂಡಿದ್ದಾರೆ. ಈ ಅವಧಾನತಾಳಪಲ್ಲವಿಗೆ ಬಲಗೈಯಲ್ಲಿ ಚತುರಶ್ರ ರೂಪಕತಾಳವನ್ನು ಖಂಡ ನಡೆಯಲ್ಲಿಯೂ, ಎಡಗೈಯಲ್ಲಿ ಚತುರಶ್ರ ಮಠ್ಯತಾಳವನ್ನು ತ್ರಿಶ್ರನಡೆಯಲ್ಲಿಯೂ ಸಂಯೋಜಿಸಿದ್ದಾರೆ. ಪ್ರಹೇಲಿಕಾದ ಮೂರನೆಯ ಬೇಧವಾದ ಅವಧಾನವನ್ನು ಕುರಿತು - ಗೀತ, ವಾದ್ಯ ಪ್ರಬಂಧಗಳಲ್ಲಿ ಪ್ರಯೋಗಿಸಿದ, ಇಷ್ಟಾನುಸಾರವಾದ, ಆದರೆ ಲಯನಿಯತಿಗೆ ಒಳಪಟ್ಟ ತಾಳಗಳನ್ನು ವ್ಯತ್ಯಾಸಗೊಳಿಸಿ ಪುನಃ ಪುನಃ ಆವೃತ್ತಿಯನ್ನು ಮಾಡಿ ಒಟ್ಟಿನಲ್ಲಿ ಮತ್ತು ಬಿಡಿ ಬಿಡಿಯಾಗಿ ಕೂಡಿಸಿ ತ್ರೈಕಾಲುಮುಖಗಳಲ್ಲಿ ತಜ್ಞರು ಪ್ರಯೋಗಿಸಿದರೆ ಆಗ ಅದನ್ನು ಲಕ್ಷ್ಯಲಕ್ಷಣಗಳನ್ನು ಬಲ್ಲವರು ಅವಧಾನವೆಂದು ಕರೆಯುತ್ತಾರೆ ಎಂದು ಪುಂಡರೀಕ ವಿಠ್ಠಲನು ತನ್ನ ನರ್ತನನಿರ್ಣಯದಲ್ಲಿ ಹೇಳಿದ್ದಾನೆ. ಮೃದಂಗ, ಮದ್ದಲೆ, ಘಟ ಇತ್ಯಾದಿ ಲಯವಾದ್ಯವಾದನಗಳಲ್ಲಿ ಈ ರೀತಿಯಾದ ಪ್ರಹೇಲಿಕಾಗಳು ನಡೆಯುವುದು ಸರ್ವೇಸಾಮಾನ್ಯವಾಗಿದೆ.

ಯಾವುದೇ ರೀತಿಯ ಪಲ್ಲವಿಯಾದರೂ ಅದರ ಸಾಹಿತ್ಯದಲ್ಲಿ ಕ್ರಿಯಾಪದವು ಇರಲೇ ಬೇಕಾದದ್ದು ನಿಯಮ. ಪಲ್ಲವಿಯ ಮಾತುವನ್ನು ಕೆಲವು ವೇಳೆ ಒಂದೊಂದು ಪದವಾಗಿ ಹೆಚ್ಚಿಸಿ ಬೆಳೆಸುವ ಸ್ರೋತೋವಹಯತಿಯ ಸಾಹಿತ್ಯಕ್ಕೆ ಉದಾಹರಣೆಯಾದ "ಪಗವಾರು ಬೋಧಿಂಚರೋ - ಸಾಮಿ ಪಗವಾರು ಬೋಧಿಂಚರೋ - ನಾ ಸಾಮಿ ಪಗವಾರು ಬೋಧಿಂಚರೋ - ಏರಾ ನಾ ಸಾಮಿ ಪಗವಾರು ಬೋಧಿಂಚರೋ" ಎಂಬ ಸಾಹಿತ್ಯ ರೀತಿಯೋ , ಅಥವಾ ಒಂದೊಂದೇ ಪದಗಳನ್ನು ಕಳೆದುಕೊಳ್ಳುತ್ತ ಮುನ್ನಡೆಯುವ ಗೋಪುಚ್ಛಯತಿಗೆ ಉದಾಹರಣೆಯಾದ "ಸುಗುಣನಿಧಿ ಚಂದ್ರಕುಲಶೇಖರೇಂದ್ರ - ಗುಣನಿಧಿ ಚಂದ್ರಕುಲಶೇಖರೇಂದ್ರ - ನಿಧಿಚಂದ್ರ ಕುಲಶೇಖರೇಂದ್ರ ಚಂದ್ರ ಕುಲಶೇಖರೇಂದ್ರ - ಶೇಖರೇಂದ್ರ ಎಂಬ ಪಲ್ಲವಿ ಸಾಹಿತ್ಯ ರೀತಿಗಳೋ ಇರುವುದುಂಟು. ಕೆಲವು ಸ್ವರಾಕ್ಷರ ಪಲ್ಲವಿಗಳು ಚಮತ್ಕಾರವಾಗಿ ರಚಿತವಾಗುತ್ತವೆ. ಉದಾಹರಣೆಗೆ ಗಧಾಧಾರಿ ನೀ ಸದಾ ಸಾಮಧಾನಿ. ಕೆಲವು ಪಲ್ಲವಿಗಳು ಸಾಹಿತ್ಯವೇ ಇಲ್ಲದೆ

No part of this publication is allowed for copying or reproducing. Copyright protected. Copyright infrin punishable offence.

ಸೊಲ್ಲುಕಟ್ಟುಗಳೇ ಇದ್ದು ವಿಶೇಷವಾಗಿ ರಂಜನೀಯವಾಗಿರುತ್ತವೆ. ಪಲ್ಲವಿಯನ್ನು ಸಾಮಾನ್ಯವಾಗಿ ಕಚೇರಿಯ ಉತ್ತರಾರ್ಧದ ಪ್ರಾರಂಭದಲ್ಲಿ ಅಥವಾ ಮಧ್ಯದಲ್ಲಿ ಹಾಡಲಾಗುತ್ತದೆ. ಪಲ್ಲವಿಯ ಪ್ರಸ್ತುತಿಯು ದೀರ್ಘವಾಗಿರುವುದರಿಂದ ಕಾಲವೂ ಹೆಚ್ಚು ಬೇಕಾಗುತ್ತದೆ. ಇದು ಮುಖ್ಯವಾಗಿ ರಾಗ, ತಾನ, ಪಕ್ಕವಾದ್ಯಗಾರರ ನುಡಿಸಾಣಿಕೆ, ಪಲ್ಲವಿ ನೆರವಲು, ಕಲ್ಪನಾಸ್ವರಪ್ರಸ್ತಾರಗಳು, ಲಯವಿನ್ಯಾಸಗಳು, ಲಯವಾದ್ಯಗಳ ತನಿ ನುಡಿಸಾಣಿಕೆಗಳನ್ನು ಒಳಗೊಂಡಿರುತ್ತದೆ. ಪಲ್ಲವಿಯನ್ನು ಹಾಡುವ ಮೊದಲು ವಿಸ್ತಾರವಾದ ರಾಗಾಲಾಪನೆಯನ್ನು ವಿದ್ವಾಂಸರು ಮಾಡುತ್ತಾರೆ. ಕೆಲವೊಮ್ಮೆ ಒಂದೇ ಪಲ್ಲವಿಗೆ ಎರಡು ರಾಗಗಳನ್ನು ಅಳವಡಿಸಿದ್ದರೆ ಎರಡು ರಾಗಗಳನ್ನು ಆಲಾಪಿಸಲಾಗುತ್ತದೆ.

ಇದಾದ ನಂತರ ತಾನವನ್ನು ಹಾಡಲಾಗುತ್ತದೆ. ಪ್ರಾಚೀನದ ಸಂಗೀತ ಪರಿಭಾಷೆಯಲ್ಲಿ ತಾನವೆಂದರೆ ಸ್ವರವನ್ನು ವಿಸ್ತರಿಸುವುದು ಎಂದು ಅರ್ಥ. ಅರ್ವಾಚೀನದಲ್ಲಿ ತಾನಕ್ಕೆ ಮಧ್ಯಮಕಾಲವೆಂದೂ ಹೆಸರಿದ್ದು ಪಲ್ಲವಿಗಾಯನದ ಮೊದಲು ತಾನದ ಧಾತುಗಳ ಲಯವನ್ನು ವಿವಿಧ ರೀತಿಯಲ್ಲಿ ವಿನ್ಯಾಸ ಮಾಡಲಾಗುತ್ತದೆ. ಹೀಗೆ ರಾಗದ ವಿವಿಧ ಲಯಛಂದಸ್ಸುಗಳಿಗೆ ಅಳವಡಿಸಿ, ವಿವಿಧ ಜತಿಗಳಲ್ಲಿ, ವಿವಿಧ ನಡೆಗಳಲ್ಲಿ, ಹಾಡಲಾಗುವ ಸ್ವರಗುಚ್ಛಗಳೇ ತಾನ. ಇದರಲ್ಲಿ ಗಮಕ ಪ್ರಯೋಗವು ಕಡಿಮೆಯಿರುತ್ತದೆ. ಈ ಗೇಯ ಪ್ರಕಾರವು ಆಲಾಪನೆ ಮತ್ತು ತಾಳನಿಬದ್ಧವಾದ ಹಾಡಿನ ಮಧ್ಯವರ್ತಿಯಾಗಿರುತ್ತದೆ. ರಾಗದಲ್ಲಿ ತ, ನ, ದ, ರ, ರಿ ಎಂಬ ನಿರ್ವಾಹಕ ಶಬ್ದಗಳು ಬಳಕೆಯಾಗುವಂತೆ ತಾನದಲ್ಲಿ ತ ಮತ್ತು ನಂ ಎಂಬೆರಡು ಪಾಟಾಕ್ಷರಗಳನ್ನು ಮಾತ್ರ ಬಳಸಿ ನಿರ್ವಹಿಸುವುದರಿಂದ ಈ ಹೆಸರು ಬಂದಿದೆ. ಇದು ಪ್ರಾಚೀನ ಪ್ರಬಂಧ(=ಹಾಡು) ಗಳಲ್ಲಿ ಬಳಕೆಯಾಗುತ್ತಿದ್ದ, ಬ್ರಹ್ಮಶಬ್ದ ಪ್ರತಿಪಾದಕವಾದ, ಮಂಗಳಪ್ರದವಾದ 'ತೇನ' ಎಂಬ ಅಂಗದ ಅವಶೇಷವಾಗಿ ಇಂದು ಉಳಿದುಕೊಂಡಿದೆ. ತಾನ ಶಬ್ದಕ್ಕೆ ತ ಎಂದರೆ ಶಂಕರ, ಅ ಎಂದರೆ ಬ್ರಹ್ಮ, ನ ಎಂದರೆ ವಿಷ್ಣು - ಈ ತ್ರಿಮೂರ್ತಿಗಳು 'ಮ್' ಕಾರವೆಂಬ ಬಿಂದುವಿನಲ್ಲಿ ಐಕ್ಯವಾಗಿ ಪರಬ್ರಹ್ಮವೆನ್ನಿಸುತ್ತಾರೆ, ಆದುದರಿಂದ ತಾನಂ ಎಂಬುದು ಬೀಜಮಂತ್ರ, ಇದರ ಸಾಧನೆಯಿಂದ ಮೋಕ್ಷಪ್ರಾಪ್ತಿಯಾಗುತ್ತದೆ, ತಾನಂ ಎಂಬುದು ಅನಂತ ಪದದ ರೂಪ- ಎಂಬ ನಿಷ್ಪತ್ತಿಯನ್ನು ಹೇಳುವ ವಿದ್ವಾಂಸರೂ ಇದ್ದಾರೆ.

ಕರ್ನಾಟಕ ಸಂಗೀತದಲ್ಲಿ ಸುಮಾರು ನೂರು ವರ್ಷಗಳ ಹಿಂದೆ ತಾನವು ಇನ್ನೂ ಒಂದು ರೀತಿಯಲ್ಲಿ ರೂಢಿಸಿತ್ತು. ಇದಕ್ಕೆ ಚಿಟ್ಟೆತಾನವೆಂದು ಹೆಸರು. ವೀಣೆಯಲ್ಲಿ ಮತ್ತು ಕಂಠದಲ್ಲಿ ರಾಗಗಳನ್ನು ಸುಲಭವಾಗಿ ಪರಿಚಯಿಸಿಕೊಂಡು ಅಭ್ಯಾಸ ಮಾಡುವುದಕ್ಕಾಗಿ ಅದು ರಚಿತವಾಗುತ್ತಿತ್ತು. ಚಿಕ್ಕ ಪುಟ್ಟ ತಾನಗಳನ್ನು ಆಯಾ ರಾಗದ ಲಕ್ಷಣಗಳನ್ನು ಆಂತರಿಕವಾಗಿ, ತರ್ಕಬದ್ಧವಾಗಿ, ಸ್ಪಷ್ಟವಾಗಿ ಸ್ವರಗಳನ್ನು ಆಯ್ದು ರಚಿಸಲಾಗುತ್ತಿತ್ತು. ಇವುಗಳ ಸಮಷ್ಟಿಗೆ ಕಟಕವೆಂದು ಹೆಸರು. ಸ್ಥಾಯಿ, ಸ್ಥಾಯಿತಾನ, ತ್ರಿಶ್ರಜಾತಿ ತಾನ, ಸರ್ವಲಘು ತಾನ, ಧಾಲು ತಾನ, ಪಾಟ್ಟುತಾನ ಎಂದು ಹೆಸರುಗಳ ತಾನಗಳುಳ್ಳ ಕಟಕಗಳನ್ನು ಸಂಗೀತಗುರುಗಳು ರಚಿಸಿ ಬರೆದಿಡುತ್ತಿದ್ದರು. ಇಂತಹ ಕೆಲವು ಕಟಕಗಳು ತಂಜಾವೂರು ಸರಸ್ವತೀ ಮಹಲ್ ಪುಸ್ತಕ ಭಾಂಡಾಗಾರದಲ್ಲಿ ಹಸ್ತಪ್ರತಿ ರೂಪದಲ್ಲಿ ಉಳಿದುಕೊಂಡಿವೆ. ಇವು ಬಹುಮಟ್ಟಿಗೆ ಹದಿನೆಂಟನೆಯ ಮತ್ತು ಹತ್ತೊಂಬತ್ತನೆಯ ಶತಮಾನದವುಗಳು. ಪಲ್ಲವಿಯ ಪೂರ್ವದಲ್ಲಿ ಹಾಡುವ, ನುಡಿಸುವ ತಾನಕ್ಕೂ ದೀರ್ಘವಾದ ಪರಂಪರೆಯಿದೆ. ಸಂಗೀತ ಶಿಕ್ಷಣದಲ್ಲಿ, ಘನ ರಾಗ ಪಂಚಕಗಳಾದ ನಾಟಿ, ಗೌಳ, ಆರಭಿ, ವರಾಳಿ ಮತ್ತು ಶ್ರೀರಾಗಗಳಲ್ಲಿಯೂ ನಾರಾಯಣಗೌಳ, ಮೇಚಬೌಳಿ ರಾಗಗಳಂತಹ ವಿವಿಧ, ರಾಗಗಳಲ್ಲಿಯೂ ಸ್ಥಾಯಿ, ಲಯ ಹಾಗೂ ಗಮಕಗಳಲ್ಲಿ ಒಂದೊಂದರಲ್ಲೂ ಮೂವತ್ತು ತಾನಗಳನ್ನಾದರೂ ಹಾಡಿ ನುಡಿಸಬೇಕಾಗುತ್ತಿತ್ತು. ಅಲ್ಲದೆ ವಿವಿಧ ಪ್ರಾಣಿಗಳ ಚಲನೆಗಳ ವೈಶಿಷ್ಟ್ಯವನ್ನು ಅನುಕರಿಸುವ ಮಾನವ, ಗಜ, ಅಶ್ವ, ಮಯೂರ, ಕುಕ್ಕುಟ, ಮಂಡೂಕ, ಮರ್ಕಟ, ಮತ್ತು ಚಕ್ರ ಎಂಬ ಎಂಟು ಬಗೆಯ ತಾನಗಳನ್ನು ತಾಳಸಹಿತವಾಗಿ ಪ್ರಸ್ತುತಗೊಳಿಸುವ ಪದ್ಧತಿಯಿತ್ತು. ಇದು ಮಾತ್ರವಲ್ಲದೆ ಕರ್ನಾಟಕದ ವೈಣಿಕರು ಛತ್ತೀಸ (=36)ತಾನಗಳೆಂಬ ಚಿತ್ರ ವಿಚಿತ್ರ ತಾನಗಳನ್ನೂ ನುಡಿಸುವ ಪಾಂಡಿತ್ಯವನ್ನು ಹೊಂದಿದ್ದರು. ಪದ್ಮಶ್ರೀ, ಮಹಾಮಹೋಪಾಧ್ಯಾಯ ಡಾ. ರಾ. ಸತ್ಯನಾರಾಯಣರವರು ಸಂಶೋಧಿಸಿ ತಮ್ಮ 'ಕರ್ನಾಟಕಸಂಗೀತವಾಹಿನಿ' ಪುಸ್ತಕದಲ್ಲಿ ಉಲ್ಲೇಖಿಸಿದ, ತಾನಗಳನ್ನು ಹಾಡಿನುಡಿಸುವುದರಲ್ಲಿ ಸಿದ್ಧಹಸ್ತ - ಸಿದ್ಧಕಂಠರಾಗಿದ್ದ ಕೆಲವು ಹಿರಿಯ ವಿದ್ವಾಂಸರ ಹೆಸರುಗಳನ್ನು ಇಲ್ಲಿ ಹೇಳಬಹುದು —ವೀಣೆ ಕುಪ್ಪಯ್ಯ, ವೀಣೆ ವೆಂಕಟಸುಬ್ಬಯ್ಯ, ದೊಡ್ಡ ಶೇಷಣ್ಣ, ರಾಮಣ್ಣ, ವೀಣಾಶೇಷಣ್ಣ, ವೀಣಾಭಕ್ಷಿ ಸುಬ್ಬಣ್ಣ, ವೀಣಾ ಕೂಸಪ್ಪ ವೀಣಾ ಕೋನೇಟಯ್ಯ, ಚಿಕ್ಕರಾಮಪ್ಪ, ಘನಂ ಸೀನಯ್ಯ, ಘನಂ ರಾಘವಯ್ಯ, ಪಂಜು ಅಯ್ಯರ್, ಪಟ್ಟಣಂ ಸುಬ್ರಹ್ಮಣ್ಯ

No part of this publication is allowed for copying or reproducing. Copyright protected. Copyright infrin
punishable offence.

ಅಯ್ಯರ್, ಪೂಚ್ಚಿ ಅಯ್ಯಂಗಾರ್, ಮಹಾವೈದ್ಯನಾಥ ಶಿವನ್, ಮೈಸೂರು ವಾಸುದೇವಾಚಾರ್ಯ, ಭೈರವಿ ಕೆಂಪೇಗೌಡ ಇತ್ಯಾದಿ.

ಇದಲ್ಲದೆ, ನಾಲ್ಕೈದು ಘಂಟೆಗಳಷ್ಟು ದೀರ್ಘಕಾಲಗಳಲ್ಲಿ ನಡೆಯುತ್ತಿದ್ದ ಕಚೇರಿಗಳಲ್ಲಿ ಪಲ್ಲವಿಗೆ ಮಾತ್ರವಲ್ಲದೆ, ನೆರವಲು ಮಾಡುತ್ತಿದ್ದ ಕಾಂಭೋಜಿ ರಾಗದ 'ಶ್ರೀ ಸುಬ್ರಹ್ಮಣ್ಯಾಯ ನಮಸ್ತೆ', ಪೂರ್ವಿಕಲ್ಯಾಣಿರಾಗದ 'ಮೀನಾಕ್ಷಿ ಮೇಮುದಂ' ನಂತಹ ಕೀರ್ತನೆಗಳಿಗೂ ಕಾಂಚನ ವೆಂಕಟಸುಬ್ರಹ್ಮಣ್ಯಂರವರು ರಾಗದೊಂದಿಗೆ ತಾನವನ್ನೂ ಹಾಡಿ, ನೆರವಲು, ಸ್ವರ ಪ್ರಸ್ತಾರಗಳನ್ನು ಮಾಡುತ್ತಿದ್ದರು. ಅವರಿಗೆ, ಆ ಸಂಪ್ರದಾಯವು ಬಹುಶಃ ಅವರ ಗುರುಗಳಾಗಿದ್ದ ಚೆಂಬೈ ವೈದ್ಯನಾಥ ಭಾಗವತರ್ ರವರಿಂದಲೂ, ಜಿ. ಎನ್.ಬಾಲಸುಬ್ರಹ್ಮಣ್ಯಂರವರಿಂದಲೂ ಅಭ್ಯಾಸವಾಗಿದ್ದಿರಬೇಕು. ರಾಗ, ತಾನಗಳ ಪ್ರಸ್ತುತಿಯು ಮುಖ್ಯಗಾಯಕ ಹಾಗೂ ಪಕ್ಕವಾದ್ಯದವರಿಂದ ಮುಗಿದ ನಂತರ ಪಲ್ಲವಿಯ ಗಾಯನವು ಆರಂಭವಾಗಿ ಮೂಲಪಾಠವನ್ನು ತಾಳಾವರ್ತದಲ್ಲಿ ಅದರ ನೆಲೆಯನ್ನೂ ವಿನ್ಯಾಸವನ್ನೂ ಸ್ಪಷ್ಟವಾಗಿ ಹಾಡಿ ತೋರಿಸುತ್ತಾರೆ. ವಾದ್ಯಕಾರರಾದರೆ, ತಾಳವನ್ನು ಹಾಕಿಕೊಂಡು ಹಾಡಿ ತೋರಿಸುತ್ತಾರೆ. ಇದರಿಂದ ಪಕ್ಕವಾದ್ಯ ವಿದ್ವಾಂಸರಿಗೂ ತಾಳ, ಅದರ ಜಾತಿ, ನಡೆ, ಎಡುಪು, ಅರುದಿ, ತಾಳಾವರ್ತದಲ್ಲಿ ಮಾತುವಿನ ಅಕ್ಷರಗಳು ಸ್ಥಾಪನೆಗೊಂಡ ಸ್ಥಳಗಳು, ಮುಂತಾದವು ತಿಳಿಯುತ್ತದೆ. ಶ್ರೋತೃಗಳಿಗೂ ಪಲ್ಲವಿಯ ಮೂಲಪಾಠವು ತಿಳಿದು ಕಚೇರಿಯನ್ನು ಕೇಳಿ ತೃಪ್ತಿಯಿಂದ ತಣಿಯಲು ಅವಕಾಶವಾಗುತ್ತದೆ.

ಪಲ್ಲವಿಯ ಪ್ರಸ್ತುತಿಯು ವಿಶೇಷವಾದ ಗಣಿತಜ್ಞಾನವನ್ನೂ ಪ್ರತಿಭೆಯನ್ನೂ ಅಪೇಕ್ಷಿಸುತ್ತದೆ. ಪಲ್ಲವಿಯು ಸಾಮಾನ್ಯವಾಗಿ ಚತುರಶ್ರ ನಡೆಯಲ್ಲಿ ನಡೆಯುವುದಿದ್ದರೂ, ತ್ರಿಶ್ರ ಹಾಗೂ ಖಂಡನಡೆಗಳಲ್ಲಿ ನಡೆಯುವುದೂ ಉಂಟು. ಮಿಶ್ರ ಹಾಗೂ ಸಂಕೀರ್ಣ ನಡೆಗಳ ಪಲ್ಲವಿ ಪ್ರಸ್ತುತಿಯು ಬಹು ಅಪರೂಪವೆಂದೇ ಹೇಳಬೇಕು. ಆದರೆ ಇದೂ ಸಹ ಅವಧಾನತಾಳಪಲ್ಲವಿ ಪ್ರಸ್ತುತಿಯಲ್ಲಿ ನಡೆಯುತ್ತದೆ. ಒಂದು ತಾಳಾವರ್ತದಲ್ಲಿ ಪಂಚನಡೆಯ ಪಲ್ಲವಿಯನ್ನು ಅಪರೂಪವಾಗಿ ವಿದ್ವಾಂಸರು ಹಾಡುವುದೂ ಉಂಟು. ಇಂತಹ ಪಲ್ಲವಿಗಳಲ್ಲಿ ತಾಳಾವರ್ತದ ನಿಯತವಾದ ಭಾಗಗಳಲ್ಲಿ ನಿಯತವಾದ ನಡೆಯನ್ನು ನಿರ್ವಹಿಸಲಾಗುತ್ತದೆ. ಇನ್ನು ಕೆಲವರು ಬಹು ಅಪರೂಪದಲ್ಲಿ ಪಂಚಜಾತಿಪಲ್ಲವಿಯೆಂಬ ಪ್ರಕಾರವನ್ನು ಹಾಡುವುದೂ ಉಂಟು. ಆದರೆ ಇದು ಸಂಪೂರ್ಣವಾಗಿ ಸಂಗೀತಶಾಸ್ತ್ರಮರ್ಯಾದಾಬಾಹಿರವಾದುದು. ಏಕೆಂದರೆ ತಾಳಾವರ್ತದ ಯಾವುದೇ ಎಣಿಕೆಗೂ ಅದರ ನಂತರದ್ದಕ್ಕೂ ನಡುವೆ ಇರುವ ಕಾಲಪ್ರಮಾಣವು ಒಂದೇ ಆಗಿರಬೇಕೆಂಬ ಕಾಲಪ್ರಮಾಣವು ಒಂದೇ ಆಗಿರಬೇಕೆಂಬ ಸಂಗೀತಶಾಸ್ತ್ರದ ಆಧಾರಪ್ರತಿಜ್ಞೆಯನ್ನು ಇದು ಉಲ್ಲಂಘಿಸುತ್ತದೆ.

ಪಲ್ಲವಿಗಾಯನದ ಇತಿಹಾಸದಲ್ಲಿ ಪ್ರಸಿದ್ಧರಾದ ಕೆಲವು ವಿದ್ವಾಂಸರ ಹೆಸರುಗಳನ್ನು ಪದ್ಮಶ್ರೀ ಮಹಾಮಹೋಪಾಧ್ಯಾಯ ಡಾ. ರಾ. ಸತ್ಯನಾರಾಯಣರವರು ಸಂಶೋಧಿಸಿ ತಮ್ಮ 'ಕರ್ನಾಟಕಸಂಗೀತವಾಹಿನಿ' ಪುಸ್ತಕದಲ್ಲಿ ಉಲ್ಲೇಖಿಸಿದಂತೆ ನೀಡಲಾಗುವುದು. ಇವರು 18 -, 19 ಹಾಗೂ 20ನೆಯ ಶತಮಾನದ ಆದಿಯಲ್ಲಿದ್ದವರು - ಪಚ್ಚಿಮಿರಿಯಂ ಆದಿಪ್ಪಯ್ಯ, ಅವರ ಮಗನಾದ ಸುಬ್ಬುಕುಟ್ಟಿ, ಶಿಷ್ಯನಾದ ಪಲ್ಲವಿ ಗೋಪಾಲಯ್ಯ, ಪಲ್ಲವಿ ಶಿವರಾಮಯ್ಯ, ನಂತರ ಬೊಬ್ಬಿಲಿ ಕೇಶವಯ್ಯ ಹಾಗೂ ಶ್ಯಾಮಾಶಾಸ್ತ್ರಿಗಳ ಹೆಸರನ್ನು ಈಗಾಗಲೇ ಹೇಳಿದೆ. ತಿರುಮಲರಾಜ ಪಟ್ಟಣದ ರಾಮುಡು ಭಾಗವತ, ತ್ಯಾಗರಾಜರ ಗುರುಗಳಾಗಿದ್ದ ಸೊಂಟಿ ವೆಂಕಟರಮಣಯ್ಯ, ತ್ಯಾಗರಾಜರು, ಅವರ ಶಿಷ್ಯರುಗಳಾದ ನೇಮಂ ಸುಬ್ರಹ್ಮಣ್ಯಯ್ಯ, ಅಯ್ಯಾ ಭಾಗವತ, ಸೋಜಿರಿ ಸೀತಾರಾಮಯ್ಯ, ವೀಣಾ ಕುಪ್ಪಯ್ಯ, ಕುಪ್ಪಯ್ಯನ ಮಕ್ಕಳಾದ ತಿರುವತ್ತೂರು ತ್ಯಾಗಯ್ಯ, ತಿರುವತ್ತೂರು ಸೀತಾರಾಮಯ್ಯ, ತ್ಯಾಗರಾಜರ ಶಿಷ್ಯ ಪರಂಪರೆಗೆ ಸೇರಿದ ಮಹಾವೈದ್ಯನಾಥ ಅಯ್ಯರ್, ಅವರ ಶಿಷ್ಯರಾದ ಪಟ್ಟಣಂ ಸುಬ್ರಹ್ಮಣ್ಯ ಅಯ್ಯರ್, ಅವರ ಶಿಷ್ಯರಾದ ರಾಮನಾಡ್ ಶ್ರೀನಿವಾಸ ಅಯ್ಯಂಗಾರ್, ಶೇಷಗಿರಿರಾವ್, ಕಂಚಿ ಶೇಷಯ್ಯರ್, ಮೊದಲಾದವರು ಪಲ್ಲವಿ ತಜ್ಞರು. ಮುದ್ದುಸ್ವಾಮಿ ದೀಕ್ಷಿತರ ಪರಂಪರೆಯಲ್ಲಿ ಪೊನ್ನಯ್ಯ ಪಿಳ್ಳೈ, ಮತ್ತು ಅವರ ಶಿಷ್ಯಪ್ರಶಿಷ್ಯರು ಪಲ್ಲವಿಗಾಯನದಲ್ಲಿ ಪ್ರಸಿದ್ಧರಾಗಿದ್ದರು. ಇವರುಗಳೇ ಅಲ್ಲದೆ ಪಲ್ಲವಿ ಶೇಷಯ್ಯರ್, ಶೇಷಾಚಲ ಭಾಗವತ, ತಿನ್ನವೆಲ್ಲಿ ವೆಂಗುಭಾಗವತ, ತಿನ್ನವೆಲ್ಲಿ ವೆಂಗುಪಿಳ್ಳೈ, ಗುರುಮೂರ್ತಿ ನಟ್ಟುವನ ಶಿಷ್ಯ ಅಖಿಲಾಂಡಂ, ಉಡಯಾರ್ ಪಾಳ್ಯದ ಘನಂ ಕೃಷ್ಣಯ್ಯ, ಚಿದಂಬರಂ ಕೃಷ್ಣಯ್ಯರ್, ತಲೈನಾಯರಿನ ಪಲ್ಲವಿ ಸೋಮಯ್ಯರ್,, ಮಧುರೈ ಕೃಷ್ಣಯ್ಯಂಗಾರ್, ಮಚಲೀಪಟ್ಟಣದ ಸ್ವರಂ ಕೊಂಡಯ್ಯ, ತಿರುವಾಲೂರು ಮುತ್ತಯ್ಯ, ನಾಮಕ್ಕಲ್ ನರಸಿಂಹಯ್ಯಂಗಾರ್, ಪುದುಕೋಟೆಸಂಸ್ಥಾನದ ಮಾತೃಭೂತಯ್ಯನ ಮಗ ಗೋಪಾಲ ಸ್ವಾಮಯ್ಯ, ತಿರುವಿಶನಲ್ಲೂರು ನಾರಾಯಣಸ್ವಾಮಯ್ಯರ್, ಪಂಚಾಪಕೇಶ

No part of this publication is allowed for copying or reproducing. Copyright protected. Copyright infrin punishable offence.

ಭಾಗವತ, ತಿರುವಾರೂರು ಪಂಚಾಪಕೇಶಶಾಸ್ತ್ರಿ, ಹರಿಕೇಶನಲ್ಲೂರು ಮುತ್ತಯ್ಯ ಭಾಗವತ, ಮದ್ರಾಸ್ ಮುತ್ತುಸ್ವಾಮಿ ನಟ್ಟುವ, ಕೆಹರ ಮುತ್ತಯ್ಯ, ಮಾಯಾವರಂ ವೈದ್ಯನಾಥಯ್ಯರ್, ಕೊನೇರಿರಾಜಪುರಂ ವೈದ್ಯನಾಥಯ್ಯರ್, ಆಂಧ್ರಂ ನರಸಿಂಹುಲು ವಿಜಯನಗರ ಸಂಸ್ಥಾನದ ಗುರುರಾಯಾಚಾರ್ಯ, ಅವನ ಮಗನಾದ ಸೀತಾರಾಮಯ್ಯ,ತ್ಯಾಗರಾಜ ಪಿಳ್ಳೈ, ಇತ್ತೀಚೆಗೆ ನಾಯನಾ ಪಿಳ್ಳೈ ಮುಂತಾದ ಅನೇಕರು. ಕರ್ನಾಟಕದಲ್ಲಿ ನೂರೆಂಟು ದೇಶೀತಾಳಗಳಲ್ಲಿ ಪಲ್ಲವಿಯನ್ನು ಹಾಡುವ ಕ್ರಮವನ್ನು ಪಲ್ಲವಿ ರಾಮಲಿಂಗಯ್ಯನು ಉದ್ಘಾಟಿಸಿದುದನ್ನು ಈಗಾಗಲೇ ಉಲ್ಲೇಖಿಸಿದೆ. ಕರ್ನಾಟಕದಲ್ಲಿ ಪಲ್ಲವಿಗಾಯನದ ಪ್ರತಿಭಾಪೂರ್ಣ ಪ್ರತಿನಿಧಿಗಳು ಅಲಸೂರು ಕೃಷ್ಣಯ್ಯ, ನಖಾಸು ರುದ್ರಪ್ಪ, ಭೈರವಿ ಕೆಂಪೇಗೌಡ, ಮೈಸೂರು ವಾಸುದೇವಾಚಾರ್ಯ, ವೀಣೆ ಶಾಮಣ್ಣ, ವೀಣೆ ಶೇಷಣ್ಣ, ಮೈಸೂರು ಸದಾಶಿವರಾವ್, ಚಿಕ್ಕರಾಮಪ್ಪ, ಬಿಡಾರಂ ಕೃಷ್ಣಪ್ಪ, ನಾರಾಯಣಸ್ವಾಮಿ ಭಾಗವತ ಮುಂತಾದ ಹಲವರು.

ಅವಧಾನತಾಳಪಲ್ಲವಿಗೆ ಪಲ್ಲವಿಯ ಎಲ್ಲ ನಿಯತಿಗಳೂ ಅನ್ವಯವಾಗುತ್ತದೆ. ಮನಸ್ಸು, ಬುದ್ಧಿಗಳ ಏಕಾಗ್ರತೆಯನ್ನು ಅತೀವವಾಗಿ ಅಪೇಕ್ಷಿಸುವುದರಿಂದಲೇ ಇದಕ್ಕೆ ಈ ಹೆಸರು ಬಂದಿದೆ. ಇದು ಪ್ರೌಢಿಮೆಯ ಪರಮಾವಧಿಯನ್ನು ಮುಟ್ಟಿದ ಗೇಯಪ್ರಕಾರ ವಿಶೇಷ.  ಇಲ್ಲಿ ಪ್ರೌಢಿಮೆಯ ಪ್ರದರ್ಶನವಿರುವುದು ಮುಖ್ಯವಾಗಿ ತಾಳದ ಮೇಲಿನ ಹಿಡಿತದಲ್ಲಿ. ಇದು ಗಾಯನದಲ್ಲಿಯೇ ವಿಶೇಷವಾಗಿ ಕಂಡುಬಂದರೂ ವಾದನದಲ್ಲಿಯೂ ಇದ್ದಿತು. ಮೈಸೂರು ಮುಮ್ಮಡಿ ಕೃಷ್ಣರಾಜ ಒಡೆಯರ್ ರವರ ಆಸ್ಥಾನ ವಿದ್ವಾಂಸರಾಗಿದ್ದ ವೀಣಾ ಶಾಮಣ್ಣನವರು ಎರಡು ಕೈಗಳು, ಎರಡು ಕಾಲ್ಗಳೂ, ತಲೆ —ಈ ಐದರಿಂದಲೂ ಐದು ಬೇರೆ ಬೇರೆ ತಾಳಗಳನ್ನು ನಡೆಸುತ್ತ ವೀಣಾವಾದನವನ್ನು ಮಾಡುತ್ತಿದ್ದರಂತೆ. ಆಂಧ್ರದ ಹರಿಕಥಾಪಿತಾಮಹ ಆದಿಭಟ್ಲ ನಾರಾಯಣದಾಸರೂ ಗಾಯನದಲ್ಲಿ ಇಂತಹದೇ ಅವಧಾನವನ್ನು ನಡೆಸುತ್ತಿದ್ದರಂತೆ. ಈ ರೀತಿಯ ಅವಧಾನತಾಳಪಲ್ಲವಿ ಗಾಯನವನ್ನು ಈಗ ಮಾಡಬಲ್ಲ ಒಬ್ಬರೇ ವಿದ್ವಾಂಸರೆಂದರೆ ಬೆಂಗಳೂರಿನ  ಡಾ. ಚಿಂತನಪಲ್ಲಿ ಶ್ರೀಕಾಂತಂ ನಾಗೇಂದ್ರಶಾಸ್ತ್ರಿಗಳು. ಅವರೂ ಅವರ ಶಿಷ್ಯರು ಸೇರಿ  ತಲೆ, ಎರಡು ಕೈ, ಎರಡು ಕಾಲುಗಳಲ್ಲಿ ಒಟ್ಟಿಗೆ ವಿಭಿನ್ನ ಜಾತಿಗಳನ್ನು ಹಾಕಿ ಅವಧಾನ ಮಾಡುವ ಮತ್ತು ಒಬ್ಬಿಬ್ಬರು ಮಾಡುವ ಅವಧಾನದ ಬದಲು ಒಂಭತ್ತು ಜನರು ಏಕ ಕಾಲದಲ್ಲಿ  ಅವಧಾನ ಮಾಡುತ್ತಾರೆ. ಈ ರೀತಿಯಾಗಿ ಹೆಚ್ಚಿನ ಅವಧಾನತಾಳಪಲ್ಲವಿಯನ್ನು ಪ್ರಸ್ತುತ ಪಡಿಸುವ ಕಲಾವಿದರು ಕರ್ನಾಟಕದವರೇ ಎನ್ನುವುದೂ ಕರ್ನಾಟಕದವರಿಗೆ ಹೆಮ್ಮೆಯ ವಿಷಯವೇ ಆಗಿದೆ. ನರ್ತನದಲ್ಲೂ ವಿಶೇಷ ಅವಧಾನವನ್ನು ಬಯಸುವ ಕೌಚಟ, ಪ್ರಹೇಲಿಕಾ ನೃತ್ತಗಳನ್ನು ಪಂಡರೀಕ ವಿಠಲನು ತನ್ನ ನರ್ತನನಿರ್ಣಯದಲ್ಲಿ ವರ್ಣಿಸಿದ್ದಾನೆಂದು ಈಗಾಗಲೇ ಹೇಳಿದೆ.

ತಾಳಾವಧಾನದ ವಿಶೇಷವೆಂದರೆ ಎರಡೂ ಕೈಗಳಲ್ಲಿ ಬೇರೆ ಬೇರೆ ತಾಳಗಳನ್ನು, ಕೆಲವು ವೇಳೆ ತಾಳ ಸಮುಚ್ಚಯಗಳನ್ನು, ಬೇರೆ ಬೇರೆ ನಡೆಗಳಲ್ಲಿ ಏಕಕಾಲದಲ್ಲಿ ನಡೆಸುತ್ತ ಅವೆರಡಕ್ಕೂ ಸರಿಯಾಗಿ ಹೊಂದಿಕೊಳ್ಳುವಂತೆ ಪಲ್ಲವಿಯನ್ನು ಹಾಡುವುದು. ಪಲ್ಲವಿಗಾಯನ ವಾದನಗಳಲ್ಲಿರುವ ಉಳಿದೆಲ್ಲ ಪ್ರೌಢಿಮೆ, ಚಮತ್ಕಾರಗಳಿಗಿಂತಲೂ ಹೆಚ್ಚಿನ ಅವಧಾನವು ಅವಧಾನತಾಳಪಲ್ಲವಿ ಗಾಯನಕ್ಕೆ ಬೇಕಾಗುತ್ತದೆ. ಅವಧಾನ ಪಲ್ಲವಿ ಪದ್ಧತಿಯಲ್ಲಿ ಮಾರ್ಗ, ದೇಶೀ, ಸುಳಾದಿ ಹಾಗೂ ಸಂಕರ ತಾಳಗಳೂ ಬಳಕೆಗಳಾಗುತ್ತವೆಂದು ಈಗಾಗಲೇ ಹೇಳಿದೆ. ಇಪ್ಪತ್ತನೆಯ ಶತಮಾನದಲ್ಲಿ ಕರ್ನಾಟಕದಲ್ಲಿಯೇ ಇದ್ದ ಪಲ್ಲವಿ ಚಂದ್ರಪ್ಪನವರು ಇದನ್ನು ಹೆಚ್ಚಾಗಿ ಪ್ರಚಾರಕ್ಕೆ ತಂದು ಜನಪ್ರಿಯಗೊಳಿಸಿದರು. ಪಲ್ಲವಿ ಚಂದ್ರಪ್ಪನವರು ಎರಡು ಕೈಗಳಲ್ಲಿಯೂ, ಎರಡು ಕಾಲುಗಳಲ್ಲಿಯೂ ಬೇರೆ ಬೇರೆ ತಾಳಗಳನ್ನು ಹಾಕಿ ತಾಳಾವಧಾನವನ್ನು ನಡೆಸುತ್ತಿದ್ದರು. (ಪಲ್ಲವಿ ಚಂದ್ರಪ್ಪನವರು ರಚಿಸಿ ಹಾಡುತ್ತಿದ್ದ ಒಂದು ಅವಧಾನತಾಳಪಲ್ಲವಿಯನ್ನು ಈ ಲೇಖನಾಂತ್ಯದಲ್ಲಿ  ನೀಡಲಾಗುವುದು). ನಂತರದ ಕಾಲದಲ್ಲಿ ತಾಳಾವಧಾನ ಪ್ರಪಂಚದಲ್ಲಿ ಕರ್ನಾಟಕದಲ್ಲಿ, ಪೂರ್ವದಲ್ಲಿ ಬೇರಾರೂ ಮಾಡದಂತಹ ಎರಡು ಶಾಶ್ವತವಾಗಿ ದಾಖಲಾರ್ಹವಾದ ಹೆಮ್ಮೆಯ ಘಟನೆಗಳು ನಡೆದವು. ಕೇವಲ ಬೆರಳೆಣಿಕೆಯಷ್ಟು ವಿದ್ವಾಂಸರು ಹಾಡುವ ಸಿಂಹನಂದನ ತಾಳಕ್ಕೂ ಅವಧಾನತಾಳಪಲ್ಲವಿಯನ್ನು ಅಳವಡಿಸಲಾಯಿತು! ಮೈಸೂರಿನ  ಡಾ. ನಂದಕುಮಾರರು ರಚಿಸಿ ಹಾಡಿದಂತಹ  ದೇಶೀತಾಳಗಳಲ್ಲಿ 128 ಅಕ್ಷರಗಳನ್ನು ಹೊಂದಿ ಅತಿ ದೊಡ್ಡ ತಾಳವಾದ ಸಿಂಹನಂದನ ತಾಳವನ್ನು ಬಲಗೈಯಲ್ಲೂ, ಎಡಗೈಯಲ್ಲಿ ಏಳು ಸುಳಾದಿ ಹಾಗೂ ಸಂಕರತಾಳಗಳನ್ನು ನಡೆಸುತ್ತ ಹಾಡಿದ ಅವಧಾನತಾಳಪಲ್ಲವಿಯು ತಾಳಾವಧಾನದ ಚರಿತ್ರೆಯಲ್ಲಿಯೇ ಮೊಟ್ಟಮೊದಲನೆಯದೇ ಆಗಿ ದಾಖಲೆಯನ್ನು ನಿರ್ಮಿಸಿತು! (ಈ ಸಿಂಹನಂದನ ಅವಧಾನತಾಳಪಲ್ಲವಿಯ ರಚನಾ ವಿವರಗಳನ್ನು ಈ ಲೇಖನಾಂತ್ಯದಲ್ಲಿ ನೀಡಲಾಗುವುದು.)ಇವರ ಶಿಷ್ಯೆಯರಾದ ಕಾಂಚನ ಸಹೋದರಿಯರಾದ ವಿ. ಕಾಂಚನ ಶ್ರೀರಂಜನಿ ಹಾಗೂ ವಿ. ಕಾಂಚನ ಶ್ರುತಿರಂಜನಿಯರು ಇದೇ ಸಿಂಹನಂದನ ತಾಳಾವಧಾನವಲ್ಲದೆ, 79 ಅಕ್ಷರಗಳಿರುವ

Copyright protected

No part of this publication is allowed for copying or reproducing. Copyright protected. Copyright infri
is punishable offence.

ಶರಭನಂದನ ತಾಳಕ್ಕೂ, ಬಲಗೈಯಲ್ಲಿ ಶರಭನಂದನ ಹಾಗೂ ಎಡಗೈಯಲ್ಲಿ ಸುಳಾದಿ ಹಾಗೂ ದೇಶೀತಾಳಗಳನ್ನು ಅಳವಡಿಸಿ ಹಾಡಿ ತಾಳಾವಧಾನವನ್ನು ಮಾಡಿ ತಾಳಪ್ರಪಂಚದಲ್ಲಿ ಇನ್ನೊಂದು ದಾಖಲೆಯನ್ನು ನಿರ್ಮಿಸಿದರು! ಸಿಂಹನಂದನ ಹಾಗೂ ಶರಭನಂದನ ತಾಳಗಳಿಗೆ ಸಂಬಂಧಪಟ್ಟ ಚಾರಿತ್ರಿಕ ಘಟನೆಯೊಂದು ತಂಜಾವೂರು ಶರಭೋಜಿ ಮಹಾರಾಜನ ಕಾಲದಲ್ಲಿ ನಡೆಯಿತು. 'ಜಗದೇಕ ಛಾಪ ಚುಟ್ಟಿ' ಎಂದು ಪ್ರಖ್ಯಾತನಾಗಿದ್ದ, ತಾಳದಲ್ಲಿ ಬಹಳ ದೊಡ್ಡ ವಿದ್ವಾಂಸನಾಗಿದ್ದ ಬೊಬ್ಬಿಲಿ ಕೇಶವಯ್ಯನು ತಾನು ಹಾಕಿದ ಪಂಥದಲ್ಲಿ ಸೋತ ವಿದ್ವಾಂಸರ ತಂಬೂರಿಗಳನ್ನೆಲ್ಲ ಗಾಡಿಯಲ್ಲಿ ಹಾಕಿಕೊಂಡು ಶರಭೋಜಿ ಮಹಾರಾಜನು ಆಳುತ್ತಿದ್ದ ತಂಜಾವೂರು ರಾಜ್ಯಕ್ಕೂ ಬಂದನು. ಅಲ್ಲಿ ತ್ಯಾಗರಾಜರಲ್ಲಿ ಹೋದಾಗ ಅವರು, ಆತನಿಗೆ ತಕ್ಕ ಪ್ರತ್ಯುತ್ತರವನ್ನು ನೀಡಲು ರಾಜನ ಆಸ್ಥಾನದಲ್ಲಿದ್ದ, ಕಂಚಿಕಾಮಾಕ್ಷಿಯ ಉಪಾಸಕರಾಗಿದ್ದ ನಾದಲೋಲ ಶ್ಯಾಮಾಶಾಸ್ತ್ರಿಗಳೇ ತಕ್ಕವರೆಂದು ಹೇಳಿ ಕಳುಹಿಸಿದರಂತೆ. ಆಸ್ಥಾನದಲ್ಲಿ ರಾಜ ಹಾಗೂ ವಿದ್ವಾಂಸರ ಸಮ್ಮುಖದಲ್ಲಿ ಸಿಂಹನಂದನ ತಾಳವನ್ನು ಹಾಡಿ ಪಂಥಾಹ್ವಾನ ಮಾಡಿ ತಂಜಾವೂರು ರಾಜ್ಯದ ವಿದ್ವಾಂಸರನ್ನೆಲ್ಲ ಸೋಲಿಸಲು ನೋಡಿದಾಗ ಲಯಜ್ಞಾನದಲ್ಲಿ ಸಾಕ್ಷಾತ್ ನಂದೀಶ್ವರನ ಅವತಾರವೇ ಆಗಿದ್ದ ಶ್ಯಾಮಾಶಾಸ್ತ್ರಿಗಳು ಆಸ್ಥಾನದಲ್ಲಿದ್ದ ವಿದ್ವಾಂಸರ ಪ್ರಾರ್ಥನೆಯ ಮೇರೆಗೆ ಆಗಿಂದಾಗ್ಗೆ ಆಶುವಾಗಿ ತಾಳವಿರಾಮಗಳನ್ನೊಳಗೊಂಡು ಕಠಿಣವಾದ, ಸಿಂಹವನ್ನು ಸಂಹಾರ ಮಾಡಲು ಶಕ್ತಿಯುಳ್ಳ ಶರಭನಂದನವೆಂಬ ಮೃಗದ ಹೆಸರನ್ನು ಇಟ್ಟು, ತಾಳವನ್ನು ರಚಿಸಿ ಎಷ್ಟೋ ಸಮಯದಿಂದ ಅಭ್ಯಾಸವಿದ್ದವರಂತೆ ಅದರಲ್ಲಿ ಲೀಲಾಜಾಲವಾಗಿ ಪಲ್ಲವಿಯನ್ನೂ ಹಾಡಿದಾಗ ಬೊಬ್ಬಿಲಿ ಕೇಶವಯ್ಯನ ಅಹಂಕಾರವು ಮುರಿದು ಶಾಮಾಶಾಸ್ತ್ರಿಗಳಿಗೆ ನಮಸ್ಕರಿಸಿದನಂತೆ. ರಾಜನು ಇಬ್ಬರು ವಿದ್ವಾಂಸರನ್ನೂ ಸನ್ಮಾನಿಸಿದನಂತೆ. (ಕಾಂಚನ ಸಹೋದರಿಯರು ರಚಿಸಿ ಹಾಡಿದ - ಬಲಗೈಯಲ್ಲಿ ಶರಭನಂದನ ಹಾಗೂ ಎಡಗೈಯಲ್ಲಿ ದೇಶೀ ಹಾಗೂ ಸುಳಾದಿತಾಳಗಳ ಅವಧಾನತಾಳಪಲ್ಲವಿಯ ರಚನಾ ವಿವರಗಳನ್ನು ಈ ಲೇಖನಾಂತ್ಯದಲ್ಲಿ ನೀಡಲಾಗುವುದು.)

ಪಲ್ಲವಿಯದಾಗಲೀ ಅವಧಾನತಾಳಪಲ್ಲವಿಯದಾಗಲಿ ಅನುಲೋಮ ವಿಲೋಮಗಳನ್ನು ಮಾಡಿದ ನಂತರ ಮಧ್ಯಮ ಹಾಗೂ ಮೇಲ್ಕಾಲಗಳಲ್ಲಿ ಪಕ್ಕವಾದ್ಯವಾದ ಪಿಟೀಲಿನೊಂದಿಗೆ ನೆರವಲು ನಡೆಯುತ್ತದೆ. ನೆರವಲು ಆದನಂತರ ಮನೋಧರ್ಮ ಸ್ವರಪ್ರಸ್ತಾರ. ಇದರಲ್ಲಿಯೂ ಸಾಕಷ್ಟು ಲೆಕ್ಕಾಚಾರಗಳು ಪ್ರಸ್ತುತಿಯಾಗುತ್ತದೆ. ಪಲ್ಲವಿಯ ತಾಳಗಳು ಬಹಳ ದೊಡ್ಡದಾಗಿದ್ದರೂ ಅಥವಾ ಅಗತ್ಯವೆನ್ನಿಸಿದರೆ ಪರಸ್ಪರ ಹೊಂದುವಂತಹ ರಾಗಮಾಲಿಕೆಯಲ್ಲಿಯೂ, ಸ್ವರ ಪ್ರಸ್ತಾರಗಳನ್ನು ವಿದ್ವಾಂಸರು ಮಾಡುತ್ತಾರೆ. ಕಡೆಯಲ್ಲಿ ಪಾಟಾಕ್ಷರಗಳಿಗೆ ಹೊಂದುವ ದೊಡ್ಡ ಮುಕ್ತಾಯಸ್ವರದಿಂದ ಗಾಯನವಾದನಗಳಲ್ಲಿ ಕಲ್ಪನಾಸ್ವರಪ್ರಸ್ತಾರಗಳು ಮುಗಿದು. ಮೃದಂಗ, ಹಾಗೂ ಅದರೊಂದಿಗಿನ ಘಟ, ಖಂಜಿರದಂತಹ ವಾದ್ಯಗಳ ತನಿಆವರ್ತವು ನಡೆಯುತ್ತದೆ. ಲಯವಾದ್ಯಗಳ ಈ ತನಿ ನುಡಿಸಾಣಿಕೆಯಲ್ಲಿ ಪ್ರಹೇಲಿಕಾದ ಅನೇಕ ಲಕ್ಷಣಗಳಿದ್ದು, ಮುಖ್ಯ ಗಾಯಕ ವಾದಕರು ಮಾಡಿದ ಲಯವಿನ್ಯಾಸಗಳೂ, ಲೆಕ್ಕಾಚಾರಗಳೊಂದಿಗೆ ತಮ್ಮದೇ ಆದ ಲೆಕ್ಕಾಚಾರಯುಕ್ತ ಪಾಟಾಕ್ಷರಗಳ ವಿನ್ಯಾಸವನ್ನು ಲಯವಾದ್ಯವಿದ್ವಾಂಸರು ತೋರುತ್ತಾರೆ. ಕಡೆಯಲ್ಲಿ ಮುಖ್ಯ ಕಲಾವಿದರು ಹಾಡಿದ ಮುಕ್ತಾಯವನ್ನೇ ಲಯವಾದ್ಯಗಳ ತನಿಕಚೇರಿಯಲ್ಲೂ ನುಡಿಸಿದ ಮೇಲೆ ಎಡುಪಿನೊಂದಿಗೆ ಗಾಯಕವಾದಕರೂ ಪುನಃ ಪಲ್ಲವಿಯ ಒಂದು ಸಾಲನ್ನು ಹಾಡಿ ನುಡಿಸುವುದರೊಂದಿಗೆ ಪಲ್ಲವಿಯು ಸಂಪನ್ನಗೊಳ್ಳುತ್ತದೆ.

No part of this publication is allowed for copying or reproducing. Copyright protected. Copyright infri
is punishable offence.

ಕೈತಾಳಗಳನ್ನು ಸಂಗೀತಶಾಸ್ತ್ರಕಾರರರು ಶಿವ ಮತ್ತು ಶಕ್ತಿ ಎಂದು ಸಂಕೇತಿಸಿದ್ದಾರೆ. ಇವುಗಳ ಮಿಥುನದಿಂದ ನಾದವು ಹುಟ್ಟುತ್ತದೆ. ಇದು ನಾದೋತ್ಪತ್ತಿಯ ಶಾಕ್ತ ಪ್ರಮೇಯ. ಈ ನಾದವು ಉತ್ತರೋತ್ತರವಾಗಿ ಸೂಕ್ಷ್ಮವಾಗುತ್ತ ನಡೆದು ಅಂತ್ಯದಲ್ಲಿ ಇರುವುದು, ಇಲ್ಲದಿರುವುದು ಎಂಬುದರ ಭೇದವನ್ನು ಮರೆ ಮಾಡಿ ಧ್ಯಾನವನ್ನು ಏಕಾಗ್ರಗೊಳಿಸುತ್ತದೆ. ಹಾಗೆಯೇ ಅವಧಾನತಾಳಪಲ್ಲವಿಯಲ್ಲಿ ಕೈತಾಳಗಳ ಬದಲು ಎರಡು ಕೈಗಳೇ ಶಿವಶಕ್ತಿಸ್ವರೂಪವಾಗುತ್ತದೆ. ತಾಳ, ಲಯಗತಿಗಳ ಬೇಧಗಳೇ ಇದರ ವೈಶಿಷ್ಟ್ಯವಾದರೂ ಪ್ರತಿಭೆಯಿಂದಲೂ, ವ್ಯುತ್ಪತ್ತಿಯಿಂದಲೂ, ಅವಧಾನದಿಂದಲೂ ಅಂತಿಮದಲ್ಲಿ ಬೇಧವು ಮರೆಯಾಗಿ ಒಂದೇ ಸ್ಥಾನದಲ್ಲಿ ಸ್ವರಲಯಗಳು ಒಂದೆಡೆಯಲ್ಲಿಯೇ ಸೇರಿ ಅದ್ವೈತವನ್ನು ಸಾಧಿಸುತ್ತದೆ. ತಮಿಳುನಾಡು, ಆಂಧ್ರ, ಕೇರಳಗಳನ್ನು ಹೋಲಿಸಿದರೆ ಕರ್ನಾಟಕದಲ್ಲಿಯೇ ಹೆಚ್ಚು ಅವಧಾನತಾಳಪಲ್ಲವಿ

Copyright protected

No part of this publication is allowed for copying or reproducing. Copyright protected. Copyright infring punishable offence.

ಗಾಯಕರು ಹೆಚ್ಚಿರುವುದು ನಮಗೆ ಗೋಚರವಾಗುತ್ತದೆ. ಕರ್ನಾಟಕದ ಇನ್ನೂ ಕೆಲವು ಸುಪ್ರಸಿದ್ಧ ಅವಧಾನತಾಳಪಲ್ಲವಿ ವಿದ್ವಾಂಸರು —ಆರ್. ಎ. ರಮಾಮಣಿ, ಪದ್ಮಾ ಗುರುದತ್, ಟಿ. ಎಸ್. ಸತ್ಯವತಿ ಮುಂತಾದವರು.

ಸಂಗೀತವಿಶ್ವದಲ್ಲಿಯೇ ಅತಿ ವಿಶಿಷ್ಟವಾದ ಅವಧಾನತಾಳಪಲ್ಲವಿ ಗೇಯಪ್ರಕಾರವಿಶೇಷಕ್ಕೆ ಹೆಚ್ಚಿನ ಪ್ರೋತ್ಸಾಹವು ಸಭಾಗಳಿಂದಲೂ ಶ್ರೋತೃಗಳಿಂದಲೂ ಸಿಗಬೇಕಾಗಿದೆ. ಯುವ ಜನಾಂಗಕ್ಕೆ ಈ ಗೇಯಪ್ರಕಾರವಿಶೇಷವು ಸುಲಭವಾಗಿ ಗಾಯನವನ್ನು ಮಾಡಲು ಎಟುಕುವಂತೆ ತಂತ್ರಗಾರಿಕೆಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಹಲವು ವಿದ್ವಾಂಸರು ಅವಧಾನತಾಳಪಲ್ಲವಿಯು ಪ್ರಾತ್ಯಕ್ಷಿಕೆಗೆ ಮಾತ್ರ ಸರಿ, ಕಚೇರಿಗೆ ತಕ್ಕುದಲ್ಲ, ಇದರಲ್ಲಿ ಸೌಂದರ್ಯವೂ, ರಸಪ್ರಜ್ಞೆಯೂ ಇಲ್ಲ ಎಂದು ಮೂಗು ಮುರಿಯುವುದೂ ಉಂಟು! ಕಠಿಣವಾದ ಪಲ್ಲವಿಗಳು ರಸಸೌಂದರ್ಯವನ್ನು ಉಂಟುಮಾಡುವುದಾದರೆ, ಇನ್ನೂ ಹೆಚ್ಚಿನ ಚಮತ್ಕಾರವುಳ್ಳ ಅವಧಾನತಾಳವು ಏಕೆ ರಸೋತ್ಪತ್ತಿಯನ್ನು ಉಂಟುಮಾಡುವುದಿಲ್ಲ? ಅವಧಾನತಾಳಪಲ್ಲವಿಯ ಗಾಯಕನ ರಾಗಾಲಾಪನೆ, ನೆರವಲು, ಸ್ವರ ಕಲ್ಪನೆಗಳು ಆನಂದದ ರಸೋತ್ಪತ್ತಿಯನ್ನು ಉಂಟುಮಾಡುವುದಿಲ್ಲವೇ? ಎರಡು ಕೈಗಳಲ್ಲಿ ಬೇರೆ ಬೇರೆ ತಾಳಗಳನ್ನು ಹಾಕುವ ಚಮತ್ಕಾರವು ಅದ್ಭುತ ಭಾವದ ರಸೋತ್ಪತ್ತಿಯನ್ನು ಉಂಟುಮಾಡುವುದಿಲ್ಲವೇ? ಇದರಲ್ಲಿ ತಾಳವನ್ನು ಹಾಕುವ ಕಲಾವಿದರಿಗೂ, ಅದಕ್ಕೆ ಅನುಸರಿಸಿ ಪಕ್ಕವಾದ್ಯವನ್ನು ನುಡಿಸುವ ಕಲಾವಿದರಿಗೂ ಕಷ್ಟವಲ್ಲದೆ, ಶ್ರೋತೃಗಳಿಗೆ ರಸಭಂಗವಾಗುವ ವಿಷಯವೇನಿದೆ? ಸ್ವಲ್ಪ ಸ್ವಲ್ಪವಾಗಿ ತಾಳಗಳನ್ನು ಗಮನಿಸುವ ಅರಿವು ಉಂಟಾದರೆ ಉಂಟಾಗುವ ಆನಂದವು ಹೆಚ್ಚಿನದು. ಇದು ಬರೀ ಪಲ್ಲವಿಗಾದರೂ ಅನ್ವಯಿಸುತ್ತದೆ!

ₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒ

No part of this publication is allowed for copying or reproducing. Copyright protected. Copyright infring punishable offence.

**★"ಕೆಲವು ವಿಶೇಷವಾದ ಅವಧಾನತಾಳಪಲ್ಲವಿಯ ವಿವರಗಳು"—**

1. ಈ ಕೆಳಗೆ ನೀಡಿದ ಅವಧಾನ ಪಲ್ಲವಿಯನ್ನು ಸುಪ್ರಸಿದ್ಧ ವಿದ್ವಾಂಸರಾಗಿದ್ದ *ದಿ. ಪಲ್ಲವಿ ಚಂದ್ರಪ್ಪ*ನವರು ರಚಿಸಿದ್ದು. ಅದನ್ನು ಅವರು ಚಾರುಕೇಶಿ ರಾಗದಲ್ಲಿ ಹಾಡುತ್ತಿದ್ದರು.

   ★ಸಾಹಿತ್ಯ —"ಪಾಮರ ಜನ ಪಾಲಿನಿ ಪಾಪ ಶಮನಿ"

   ★ತಾಳಗಳ ವಿವರ —

   ಬಲಗೈಯಲ್ಲಿ - 'ತೋಯ'ತಾಳ (ಮಿಶ್ರ ಅಟ್ಟ) - ಚತುರಶ್ರ ನಡೆಯಲ್ಲಿ,<br>
   ಎಡಗೈಯಲ್ಲಿ - 'ಉದಯ'ತಾಳ (ಖಂಡ ಮಠ್ಯ) - ತ್ರಿಶ್ರ ನಡೆಯಲ್ಲಿ.

ₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒₒ

2) *"ಸಿಂಹನಂದನ, ಸಂಕರತಾಳ ಹಾಗೂ ಸುಳಾದಿ ತಾಳಗಳ ಅವಧಾನ ಪಲ್ಲವಿ"*

ಈ ಬಹು ಅಪರೂಪ ಅವಧಾನ ಪಲ್ಲವಿಯಲ್ಲಿ, ಬಲಗೈಯಲ್ಲಿ— ಸಿಂಹನಂದನತಾಳ ಹಾಗೂ,ಎಡಗೈಯಲ್ಲಿ 1.ಖಂಡ ತ್ರಿಪುಟ 2.ಖಂಡ ರೂಪಕ 3.ಚ.ತ್ರಿಪುಟ =ಆದಿತಾಳ 4.ತ್ರಿಶ್ರ ಅಟ 5.ಚ.ರೂಪಕ 6.ಮಿ.ಝಂಪೆ 7.ಚ. ರೂಪಕ 8.ಮಿಶ್ರ ದೇಶ್ಯ ಸಂಕೀರ್ಣ ತ್ರಿಪುಟ ತಾಳ. ಈ ಅವಧಾನ ಪಲ್ಲವಿಯ ತಾಳಗಳನ್ನು ಎರಡು ಕೈಗಳಿಗೂ ಸಂಯೋಜಿಸಿದವರು ಮೈಸೂರಿನ ವಿದ್ವಾನ್ ಡಾ. ಆರ್. ಎಸ್. ನಂದಕುಮಾರ್ ರವರು.

ಸಾಹಿತ್ಯ : "ದಾನವ ಮದಗಜ ಸಿಂಹ ನೃಸಿಂಹಾವತಾರ, ದಾನವತನಯ ವರದ ವರಲಕ್ಷ್ಮೀ ರಮಣ ಸಿಂಹನಂದನ ತಾಳಂ ಅವಧಾರಯ" -

Copyright protected

No part of this publication is allowed for copying or reproducing. Copyright protected. Copyright infringement is punishable offence.

ಸಾಹಿತ್ಯ ರಚನೆ : ಪದ್ಮಶ್ರೀ, ಮಹಾಮಹೋಪಾಧ್ಯಾಯ ಡಾ. ರಾ ಸತ್ಯನಾರಾಯಣರವರು

*ರಾಗ : ಸಿಂಹೇಂದ್ರಮಧ್ಯಮ.*

ಈ ಅವಧಾನ ಪಲ್ಲವಿಯನ್ನು ಹಾಡುವವರು ವಿದ್ವಾನ್ ಡಾ. ಆರ್. ಎಸ್. ನಂದಕುಮಾರ್ ರವರ ಅವಧಾನ ಪಲ್ಲವಿ ಶಿಷ್ಯೆಯರಾದ ಕಾಂಚನ ಸಹೋದರಿಯರು —
ವಿದುಷಿಯರಾದ ಕಾಂಚನ ಶ್ರೀರಂಜನಿ ಮತ್ತು
ಕಾಂಚನ ಶ್ರುತಿರಂಜನಿ
°°°°°°°°

ಬಲಗೈಯಲ್ಲಿ ಹಾಕುವ —

*"ಸಿಂಹನಂದನತಾಳ"*ದ ಅಂಗಗಳ ವಿವರ: -
ಒಟ್ಟು ಅಕ್ಷರ ಕಾಲ - 128. ಈ ತಾಳವು ಮುಖ್ಯವಾದ 5 ಅಂಗಗಳನ್ನು ಹೊಂದಿದೆ
1) ಚಚ್ಚತ್ಪುಟ —ಇದು ಮಾರ್ಗತಾಳ 2)ಲ ಗ ದ ದ 3)ಚಚ್ಚತ್ಪುಟ 4)ಲ ಪ ಗ ಲ ಲ 5)ಕಾಕಪಾದ =ಹಂಸಪಾದ ಈ ತಾಳದ ಆಕಾರವು ಕಾಗೆ ಅಥವಾ ಹಂಸಪಾದದಂತೆಯೇ ಇದೆ.

*ಚಚ್ಚತ್ಪುಟ ತಾಳ*ದ ಅಂಗ :
ಗ ಗ ಲ ಪ (ಗುರು, ಗುರು, ಲಘು, ಪ್ಲುತ)

*ಮಿಶ್ರ ದೇಶ್ಯ ಸಂಕೀರ್ಣ ತ್ರಿಪುಟತಾಳ*ದ ಅಂಗವು ಹೀಗಿರುತ್ತದೆ : ಒಂದು ಘಾತದ ಸಮೇತ 12 ಅಕ್ಷರ ಕಾಲಗಳಷ್ಟು ಬೆರಳೆಣಿಸಬೇಕು ಮತ್ತು 2 ಧೃತ =16 ಅಕ್ಷರ ಕಾಲ (ಇದು ಸುಳಾದಿ ಹಾಗೂ ದೇಶೀ ತಾಳದ ಮಿಶ್ರ ತಾಳ)

ಅಂಗಗಳಿಗಿರುವ ಅಕ್ಷರ ಕಾಲ.
ಧೃತ =2
ಲಘು =4
ಗುರು =8
ಪ್ಲುತ =12
ಕಾಕಪಾದ =16

ಎಡಗೈಯಲ್ಲಿ ಹಾಕುವಂತಹ ತಾಳಗಳು —ಅಕ್ಷರ ಕಾಲಗಳು.

1..ಖಂಡ ತ್ರಿಪುಟ =9
2..ಖಂಡ ರೂಪಕ =7
3..ಚ. ತ್ರಿಪುಟ =8
4..ತ್ರಿಶ್ರ ಅಟ =10
5..ಚ.ರೂಪಕ =6
6..ಮಿ.ಝಂಪೆ =10
7..ಚ.ರೂಪಕ =6
8..ಮಿಶ್ರ ದೇಶ್ಯ ಸಂಕೀರ್ಣ ತ್ರಿಪುಟ ತಾಳ =16

Copyright protected

No part of this publication is allowed for copying or reproducing. Copyright protected. Copyright infring punishable offence.

ಮೊದಲ ಏಳು ತಾಳಗಳು ವಿಳಂಬಗತಿಯಲ್ಲಿ ನಡೆಯುತ್ತವೆ. 56+56=112+ಮಧ್ಯಮ ಗತಿಯಲ್ಲಿ ಮಿಶ್ರದೇಶ್ಯಸಂಕೀರ್ಣ ತ್ರಿಪುಟದ 16 ಅಕ್ಷರಗಳು. ಒಟ್ಟು 128 ಅಕ್ಷರಗಳು.

------------------------------------------------------------

3)★ *ಶರಭನಂದನ ಅವಧಾನ ಪಲ್ಲವಿ ತಾಳಗಳ ವಿವರಗಳು*

★ಪಲ್ಲವಿಯ ಸಾಹಿತ್ಯ* - -(ಇದನ್ನು ರಚಿಸಿದವರು ಶ್ಯಾಮಾಶಾಸ್ತ್ರಿಗಳು)

"ದೇವಿ ನೀ ಪದ ಸಾರಸಮುಲೇ ಗತಿಯೆನಿ ನಿನ್ನು ನಿಜಮುಗ ನಿರತಮುಗನು ನಮ್ಮಿಯುಂಡಗ ನಾದು ಪೈ ನೀ ಕಟಾಕ್ಷಮುನು ಜೂಪವೇ ವೇಗಮೇ ಕಾಮಾಕ್ಷಿ."

°°°°°°°°°°

“ಬಲಗೈಯ ಶರಭನಂದನತಾಳಕ್ಕೆ ಎಡಗೈಯ ಸುಳಾದಿ ಹಾಗೂ ದೇಶೀತಾಳಗಳನ್ನು ಅವಧಾನಪಲ್ಲವಿಗಾಗಿ ಸಂಯೋಜಿಸಿದವರು ವಿದುಷಿ ಕಾಂಚನ ಶ್ರೀರಂಜಿನಿ”--ಹಾಡಿದವರು ಕಾಂಚನ ಸಹೋದರಿಯರಾದ ಕಾಂಚನ ಶ್ರೀರಂಜಿನಿ ಹಾಗೂ ಕಾಂಚನ ಶ್ರುತಿರಂಜನಿ.

*ಬಲಗೈಯಲ್ಲಿ -- ಶರಭನಂದನ ತಾಳ - 79 ಅಕ್ಷರಗಳು.

*ಎಡಗೈಯಲ್ಲಿ-- 1..ಉತ್ಸವ 2..ಖಂಡ ತ್ರಿಪುಟ 3..ಚತುರಶ್ರ ತ್ರಿಪುಟ 4..ಮಿಶ್ರ ಝಂಪೆ 5..ಖಂಡ ರೂಪಕ 6..ಖಂಡ ಅಟ 7..ಖಂಡ ಏಕ 8..ಮಿಶ್ರಝಂಪೆ.

*ಅಪರೂಪ ದೇಶೀ ತಾಳಗಳಾದ ಶರಭನಂದನ ಹಾಗೂ ಉತ್ಸವ ತಾಳಾಂಗಗಳ ವಿವರ.

*"ಶರಭನಂದನ"* - > ಅಕ್ಷರಕಾಲ —ಗುರು - 8 , ಲಘು - 4, ದ್ರುತ - 2 , ಲಘು-4, ಲಘು-4 , ದ್ರುತ-2 , ಅನುದ್ರುತ - 1, ಲಘುವಿರಾಮ - 5, ದ್ರುತ-2, ದ್ರುತ, 2, ದ್ರುತ - 2, ಅನುದ್ರುತ-1, ಲಘುದ್ರುತ - 6, ಲಘುದ್ರುತವಿರಾಮ - 7, ಲಘುವಿರಾಮ - 5, ದ್ರುತ - 2, ಅನುದ್ರುತ - 1, ದ್ರುತ - 1,ಅನುದ್ರುತ-1, ದ್ರುತ - 2, ಲಘುವಿರಾಮ - 5, ದ್ರುತ - 2 , ದ್ರುತವಿರಾಮ - 3, ಲಘುದ್ರುತ - 6.=79 ಅಕ್ಷರ ಕಾಲ.
ಉತ್ಸವ ತಾಳದ ಅಂಗಗಳು —ಪ್ಲುತ - 12 ., ಲಘು - 1

**ಸಿಂಹನಂದನ ಹಾಗೂ ಶರಭನಂದನ ತಾಳಗಳ ಸ್ಪರ್ಧೆ!**

ಹದಿನೆಂಟು ಹತ್ತೊಂಬತ್ತನೆಯ ಶತಮಾನದಲ್ಲಿ ಸಂಗೀತಕಚೇರಿಗಳಲ್ಲಿ ಅತಿರೇಕ ಸ್ಪರ್ಧೆಯ ಪಿಡುಗು ಅತಿಯಾಗಿ ಬೆಳೆದಿತ್ತು. ಈ ಕಾಲದಲ್ಲಿ ಪಲ್ಲವಿಗಳ ಸ್ಪರ್ಧೆಗಳನ್ನೇರ್ಪಡಿಸಲಾಗುತ್ತಿತ್ತು. ಇದರಲ್ಲಿ ಸವಾಲು ಹಾಕುವ ಒಬ್ಬ ವಿದ್ವಾಂಸ. ಅದನ್ನೆದುರಿಸುವ ಇನ್ನೊಬ್ಬ ಪ್ರತಿಸ್ಪರ್ಧಿ. ಪಂದ್ಯದ ಸೋಲುಗೆಲವುಗಳನ್ನು ತೀರ್ಮಾನಿಸುವ ಒಬ್ಬ ಅಂಪೈರ್ —ಸ್ಪರ್ಧಿ ಪ್ರತಿಸ್ಪರ್ಧಿಗಳಿಗಿಬ್ಬರಿಗೂ ಒಪ್ಪಿಗೆಯಾದ ಮೂರನೆಯ ಮಹಾವಿದ್ವಾಂಸ. ವಿಜಯಶಾಲಿಗೆ ಆಕರ್ಷಕವಾದ ಬಹುಮಾನ. ಇದನ್ನು ವೀಕ್ಷಿಸಲು ಕಿಕ್ಕಿರಿದು ನೆರೆದ ಜನಸ್ತೋಮ. ದೂರದಿಂದ ಜಗಳಕದನಗಳನ್ನು ನೋಡುವ ಆಸೆ ಯಾರಿಗಿಲ್ಲ! ಈ ಪಂದ್ಯದಲ್ಲಿ ಯಾರು ಪ್ರಾರಂಭದ ಗಾಯಕರೆಂದು ಮೊದಲೇ ನಿರ್ಧರವಾಗುತ್ತಿತ್ತು. ಅವನು ತನಗೆ ಇಷ್ಟಬಂದ ರಾಗವೊಂದನ್ನು ವಿಸ್ತಾರವಾಗಿ ಹಾಡುತ್ತಿದ್ದನು. ಇನ್ನೊಬ್ಬನು ಈ ರಾಗದಲ್ಲಿ ಒಂದು ಆಶು ಪಲ್ಲವಿಯನ್ನು ರಚಿಸಿ ಹಾಡಿ ಇನ್ನೊಂದು ರಾಗವನ್ನು ಹಾಡುತ್ತಿದ್ದನು. ಮೊದಲನೆಯವನು ಈ ರಾಗದಲ್ಲಿ ಒಂದು

No part of this publication is allowed for copying or reproducing. Copyright protected. Copyright infringement is punishable offence.

ಪಲ್ಲವಿಯನ್ನು ಅಲ್ಲಿಯೇ ರಚಿಸಿ ಹಾಡಬೇಕಾಗಿತ್ತು. ಜಯಶಾಲಿಯು ಜಯಭೇರಿ ಬಾರಿಸಿ ಬಹುಮಾನವನ್ನು ತೆಗೆದುಕೊಂಡು ಹೋಗುತ್ತಿದ್ದನು. ಪಂದ್ಯವು ಸಮವಾಯಿತೆಂದು ತೀರ್ಮಾನವಾಯಿತೆಂದರೆ ಪಣವನ್ನು ಇಬ್ಬರಿಗೂ ಸಮಾನವಾಗಿ ಹಂಚಲಾಗುತ್ತಿತ್ತು. ಇಬ್ಬರಲ್ಲಿ ಯಾರಾದರೂ ಅಂತಿಮವಾಗಿ ಜಯವು ನಿರ್ಧಾರವಾಗಬೇಕೆಂದು ಪಟ್ಟು ಹಿಡಿದರೆ ಪಂದ್ಯವು ಮುಂದುವರೆಯುತ್ತಿತ್ತು. ಇಂತಹ ಕೆಲವು ಪಂದ್ಯಗಳಲ್ಲಿ ಸೋತವನ ಸಂಗೀತವೃತ್ತಿ ಮತ್ತು ಅದರ ಸಂಕೇತವಾದ ತಂಬೂರಿಗಳೇ ಪಣವಾಗಿರುತ್ತಿದುದೂ ಉಂಟು. ಗೆದ್ದವನಿಗೆ ಸೋತವನು ಶರಣಾಗತನಾಗಿ ತನ್ನ ತಂಬೂರಿಯನ್ನೊಪ್ಪಿಸಿ ಮುಂದೆಂದೂ ಸಂಗೀತವನ್ನು ಹಾಡದೆಯೇ ಇರುವ ಷರತ್ತಿಗೆ ಒಪ್ಪಬೇಕಾಗುತ್ತಿತ್ತು. ಗೆದ್ದ ಘಟಾನುಘಟಿ ವಿದ್ವಾಂಸನು ತನ್ನ ತಂಬೂರಿಗೆ ವಿಜಯಪತಾಕೆಯ ಸಂಕೇತವಾಗಿ ಬಾವುಟವನ್ನು ಏರಿಸಿ ಮೆರೆಯುತ್ತಿದುದೂ ಉಂಟು.

ಕದನಕುತೂಹಲಪ್ರಸಕ್ತವಾದ ಇಂತಹ ಒಂದು ಪ್ರಸಿದ್ಧ ಉದಾಹರಣೆಯು ಹದಿನೆಂಟನೆಯ ಶತಮಾನದ ಸಂಗೀತಚರಿತ್ರೆಯಿಂದ ದೊರೆಯುತ್ತದೆ. ಬೊಬ್ಬಿಲಿ ಎಂಬುದೊಂದು ಪುಟ್ಟ ಪಾಳೆಯಪಟ್ಟು. ಇದರ ರಾಜಾಸ್ಥಾನದಲ್ಲಿ ಕೇಶವಯ್ಯ ಎಂಬ ಪಲ್ಲವಿಗಾಯನಪಟು ಇದ್ದ. ಸಂಗೀತಶಾಸ್ತ್ರಗ್ರಂಥಗಳು ದೊರೆಯುತ್ತಿದುದೂ, ಅವುಗಳನ್ನು ಓದಿಕೊಳ್ಳುತ್ತಿದುದೂ ಅಪರೂಪವಾಗಿದ್ದ ಆಗ ದೇಶೀತಾಳಗಳು ಅದ್ಭುತಭಾವವನ್ನೂ ಭೀತಿಯನ್ನೂ ಮೂಡಿಸುತ್ತಿದ್ದವು. ಇಂತಹ ದೀರ್ಘವೂ ಕ್ಲಿಷ್ಟವೂ ಆದ ದೇಶೀತಾಳಗಳಲ್ಲಿ ಪಲ್ಲವಿಗಳನ್ನು ರಚಿಸಿಕೊಂಡು ಗಟ್ಟಿಮಾಡಿಕೊಂಡು ಅವುಗಳನ್ನು ಅಬ್ಬರಿಸಿ ಹಾಡಿ ಪ್ರತಿಸ್ಪರ್ಧಿಗಳನ್ನು ಅವನು ಬೆದರಿಸಿ ತಣ್ಣಗೆ ಮಾಡುತ್ತಿದ್ದ! ಬೇರೆಯವರನ್ನು ಪಲ್ಲವಿಯಲ್ಲಿ ಸೋಲಿಸದ ಹೊರತೂ ತಾನು ದೊಡ್ಡವನಾಗಲಾರೆ ಎಂಬ ಕೀಳರಿಮೆ ಅವನಲ್ಲಿ! ತಂಬೂರಿಗೆ ಬಾವುಟ ಏರಿಸಿ ಸಿಕ್ಕಿದ ಸಣ್ಣದೊಡ್ಡ ವಿದ್ವಾಂಸರನ್ನೆಲ್ಲ ಸೋಲಿಸುತ್ತ, ಅವರ ತಂಬೂರಿಗಳನ್ನೆಲ್ಲ ಕಸಿದುಕೊಂಡು ಬಂಡಿಗಳಲ್ಲಿ ಹೇರಿಕೊಳ್ಳುತ್ತ ಅಬ್ಬರಿಸುತ್ತ ಮುನ್ನಡೆದ! ಈಗೇನೋ ಕಚೇರಿಗಳಿಗೆ ವಿದ್ವಾಂಸನು ವಿಮಾನದಲ್ಲಿ ಹಾರುತ್ತಾನೆ. ಆದರೆ ಎತ್ತಿನಗಾಡಿಗಳಲ್ಲಿ ಪ್ರಯಾಣ ಮಾಡಬೇಕಾಗಿದ್ದ ಕಾಲ, ಅದು. ತನ್ನ ಜೀವಮಾನವದಲ್ಲೆಲ್ಲ ಹೀಗೆ ಅವನು ಕೆಲವು ನೂರು ಮೈಲಿಗಳಷ್ಟು ಸುತ್ತಿರಬಹುದೇ, ಐವತ್ತು - ನೂರು ವಿದ್ವಾಂಸರನ್ನು ಸೋಲಿಸಿರಬಹುದೇ? ಆದರೂ ಪಲ್ಲವಿಗಾಯನದಲ್ಲಿ ಇಡೀ ಭೂಮಂಡಲವನ್ನೇ ಚಾಪೆಯಂತೆ ಸುತ್ತಿ ಕಂಕುಳಲ್ಲಿ ಇಟ್ಟುಕೊಂಡುಬಿಟ್ಟಿದ್ದೇನೆ, ಎನ್ನುವ ಭ್ರಮೆ, ಆಸೆ, ಅವನದು. ಹೀಗಾಗಿ ತನಗೆ 'ಭೂಲೋಕ ಚಾಪಚುಟ್ಟಿ' ಎಂಬ ಬಿರುದನ್ನೇ ಕೊಟ್ಟುಕೊಂಡಿದ್ದ! ಕೇಶವಯ್ಯನು ತಂಜಾವೂರಿಗೆ ಬಂದು ಅಲ್ಲಿನ ಶರಭೋಜಿ ಮಹಾರಾಜನ ಆಸ್ಥಾನವನ್ನು ತಲುಪಿ ತನ್ನ ಸವಾಲನ್ನು ಎಸೆಯುವವರೆಗೂ ಈ 'ಭಯಂಕರ' ಬಾಳು ಸಾಗಿತು. ಅಲ್ಲಿಯ ವಿದ್ವಾಂಸರಾದರೂ ಕೇಶವಯ್ಯನ ಬಗೆಗೆ ಕಥೆಗಳನ್ನೂ ದಂತಕಥೆಗಳನ್ನೂ ಕೇಳಿ ಭಯದಿಂದ ಬೆವೆತವರೇ. ತಮಗೆ ಸಂಗೀತವೃತ್ತಿಯಲ್ಲಿ ಅವಸಾನವು ಒದಗಿತೆಂದು ಕಳವಳಪಟ್ಟು ಅವರು ಕಂಚಿಕಾಮಾಕ್ಷಿಯ ಉಪಾಸಕರಾಗಿದ್ದ ನಾದಲೋಲ ಶಾಮಾಶಾಸ್ತ್ರಿಗಳನ್ನು ಆರ್ತರಾಗಿ ಬಳಿಸಾರಿ ಈ ಕೇಶವಯ್ಯನೆಂಬ ಕುತ್ತದಿಂದ ಪಾರುಮಾಡಿ ತಮ್ಮನ್ನು ರಕ್ಷಿಸಬೇಕೆಂದು ಮೊರೆಯಿಟ್ಟರು.

ಸಂಗೀತಕಚೇರಿ, ರಾಜಾಸ್ಥಾನ, ಅಬ್ಬರ, ಆಟಾಟೋಪ, ಪ್ರಚಾರ ಇವುಗಳ ಪ್ರಖರ ಬೆಳಕಿನಿಂದ ಆದಷ್ಟು ದೂರವಿರುವ ಮನೋವೃತ್ತಿ, ಶಾಮಾಶಾಸ್ತ್ರಿಗಳದು. ಆದರೂ, ನಾಡಿನ ಮರ್ಯಾದೆ ಉಳಿಯಬೇಕು, ವಿದ್ವಾಂಸರ ಅಪಮಾನ ಆಗಬಾರದು, ಎಂದುಕೊಂಡು ಕೇಶವಯ್ಯನ ಸವಾಲನ್ನು ಎದುರಿಸಲು ಒಪ್ಪಿಕೊಂಡು ಬಂದರು. ಶರಭೋಜಿ ಮಹಾರಾಜನ ಆಸ್ಥಾನದ ಪ್ರತಿಷ್ಠೆಗೆ ಸರಿಯೆನಿಸುವ ಸಿಂಹನಂದನ ತಾಳದಲ್ಲಿ ಅತ್ಯಂತ ಪ್ರೌಢಿಮೆಯಿಂದ ಕೇಶವಯ್ಯನು ಪಲ್ಲವಿಯೊಂದನ್ನು ಹಾಡಿದನು. ಇದನ್ನು ಕೇಳುತ್ತಲೇ ಆಸ್ಥಾನ ವಿದ್ವಾಂಸರಿಗೆ ಜಂಘಾಬಲವೇ ಉಡುಗಿಹೋಯಿತು. ಆದರೆ ಶಾಮಾಶಾಸ್ತ್ರಿಗಳು ಲಯಜ್ಞಾನದಲ್ಲಿ ನಂದಿಕೇಶ್ವರನಿಗೆ ಸಮರಲ್ಲವೆ! ಕ್ಷಣಾರ್ಧದಲ್ಲಿ ಸಿಂಹನಂದನಕ್ಕಿಂತ ಕಠಿಣವೂ ಕ್ಲಿಷ್ಟವೂ ಆದ, ತಾಳ ವಿರಾಮಗಳನ್ನುಳ್ಳ ದೇಶೀ ತಾಳವೊಂದನ್ನು ರಚಿಸಿಕೊಂಡು ಅದರಲ್ಲಿ ಕೇಶವಯ್ಯನಿಗೆ ಪಲ್ಲವಿಗಳ ತಲೆಬುಡಗಳೆ ಅರ್ಥವಾಗದಂತಹ ಒಂದು ಮೂಲಪಾಠವನ್ನು ರಚಿಸಿ ಆ ಆಶುಪಲ್ಲವಿಯನ್ನೇ ಇಡೀ ಜೀವಮಾನವೆಲ್ಲ ಅಭ್ಯಾಸ ಮಾಡಿದ್ದರೋ ಎನ್ನುವಷ್ಟು ಆತ್ಮಪ್ರತ್ಯಯದಿಂದ ನಿಖರವಾಗಿ, ಪ್ರೌಢವಾಗಿ, ಲೀಲಾಜಾಲವಾಗಿ ಹಾಡಿಬಿಟ್ಟರು. ಈ ತಾಳಕ್ಕೆ ಶರಭನಂದನವೆಂದು ಹೆಸರಿಟ್ಟುದೂ ಅವರೇ. ಸಿಂಹವನ್ನು ಸಂಹಾರಮಾಡಬೇಕಾದರೆ ಶರಭಕ್ಕೆ ಮಾತ್ರ ಸಾಧ್ಯವಷ್ಟೆ! ಅಂದಿನಿಂದ ಕೇಶವಯ್ಯನ ಸೊಲ್ಲಡಗಿಹೋಯಿತು. ಸಂಗೀತವಿದ್ವಾಂಸರು ಸಮಾಧಾನ, ಧೈರ್ಯಗಳ ನಿಟ್ಟುಸಿರುಬಿಟ್ಟು ತಮ್ಮ ಉದ್ಯೋಗಗಳಲ್ಲಿ ತೊಡಗಿದರು.

No part of this publication is allowed for copying or reproducing. Copyright protected. Copyright infrir is punishable offence.

"ಸಿಂಹನಂದನತಾಳ"* ದ ಅಂಗಗಳ ವಿವರ: -

ಒಟ್ಟು ಅಕ್ಷರ ಕಾಲ - 128. ಈ ತಾಳವು ಮುಖ್ಯವಾದ 5 ಅಂಗಗಳನ್ನು ಹೊಂದಿದೆ
1) ಚಚ್ಚತ್ಪುಟ —ಇದು ಮಾರ್ಗತಾಳ 2)ಲ ಗ ದ ದ 3)ಚಚ್ಚತ್ಪುಟ 4)ಲ ಪ ಗ ಲ ಲ 5)ಕಾಕಪಾದ =ಹಂಸಪಾದ ಈ ತಾಳದ ಆಕಾರವು ಕಾಗೆ ಅಥವಾ ಹಂಸಪಾದದಂತೆಯೇ ಇದೆ.

*ಚಚ್ಚತ್ಪುಟ ತಾಳ* ದ ಅಂಗ :
ಗ ಗ ಲ ಪ (ಗುರು, ಗುರು, ಲಘು, ಪ್ಲುತ)

---

ಅಂಗಗಳಿಗಿರುವ ಅಕ್ಷರ ಕಾಲ.
ಧೃತ =2
ಲಘು =4
ಗುರು =8
ಪ್ಲುತ =12
ಕಾಕಪಾದ =16
°°°°°°°°°°°°°°°°°°°°°°°°°°°

*"ಶರಭನಂದನ ತಾಳಾಂಗಗಳ ವಿವರ"* - >

ಅಕ್ಷರಕಾಲ —ಗುರು - 8 , ಲಘು - 4, ದ್ರುತ - 2 , ಲಘು-4, ಲಘು-4 , ದ್ರುತ-2 , ಅನುದ್ರುತ - 1, ಲಘುವಿರಾಮ - 5, ದ್ರುತ-2, ದ್ರುತ, 2, ದ್ರುತ - 2, ಅನುದ್ರುತ-1, ಲಘುದ್ರುತ - 6, ಲಘುದ್ರುತವಿರಾಮ - 7, ಲಘುವಿರಾಮ - 5, ದ್ರುತ - 2, ಅನುದ್ರುತ - 1, ದ್ರುತ - 1,ಅನುದ್ರುತ-1, ದ್ರುತ - 2, ಲಘುವಿರಾಮ - 5, ದ್ರುತ - 2 , ದ್ರುತವಿರಾಮ - 3, ಲಘುದ್ರುತ - 6.=79 ಅಕ್ಷರ ಕಾಲ* - > ಅಕ್ಷರಕಾಲ —ಗುರು - 8 , ಲಘು - 4, ದ್ರುತ - 2 , ಲಘು-4, ಲಘು-4 , ದ್ರುತ-2 , ಅನುದ್ರುತ - 1, ಲಘುವಿರಾಮ - 5, ದ್ರುತ-2, ದ್ರುತ, 2, ದ್ರುತ - 2, ಅನುದ್ರುತ-1, ಲಘುದ್ರುತ - 6, ಲಘುದ್ರುತವಿರಾಮ - 7, ಲಘುವಿರಾಮ - 5, ದ್ರುತ - 2, ಅನುದ್ರುತ - 1, ದ್ರುತ - 1,ಅನುದ್ರುತ-1, ದ್ರುತ - 2, ಲಘುವಿರಾಮ - 5, ದ್ರುತ - 2 , ದ್ರುತವಿರಾಮ - 3, ಲಘುದ್ರುತ - 6.=79 ಅಕ್ಷರ ಕಾಲ

**https://youtu.be/8BquIm6vwtc**
ಡಾ. ಶ್ರೀಕಾಂತಂ ನಾಗೇಂದ್ರಶಾಸ್ತ್ರಿ ಹಾಗೂ ಅವರ ಶಿಷ್ಯರಿಂದ ತಾಳಾವಧಾನ.

https://youtu.be/QreLNTrdbqI
ಇದು ಪಲ್ಲವಿ ಚಂದ್ರಪ್ಪನವರು ರಚಿಸಿದ ಅವಧಾನ ತಾಳಗಳು.

ಈ ಲಿಂಕ್ ಗಳಲ್ಲಿ ಕಾಂಚನ ಸಹೋದರಿಯರ ಅವಧಾನಪಲ್ಲವಿಗಾಯನ ಕಚೇರಿಗಳಿವೆ
https://kanchanasisters.com/2017/04/23/avadhana-pallavi-at-a-glance/

copy protected

https://youtu.be/QBLyKgOLFz4
ಶರಭನಂದನ ಅವಧಾನ

https://photos.app.goo.gl/6xVCaWzpxBbrXAjFA
ಸಿಂಹನಂದನ ಅವಧಾನ

**ಪರಾಮರ್ಶನ**

ಪದ್ಮಶ್ರೀ, ಮಹಾಮಹೋಪಾಧ್ಯಾಯ ಡಾ. ರಾ. ಸತ್ಯನಾರಾಯಣರವರ "ಕರ್ನಾಟಕಸಂಗೀತವಾಹಿನಿ" ಪುಸ್ತಕ

Copyright protected